# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಸೆಪ್ಟೆಂಬರ್ 25, 2024

ಸಂಪುಟ : 51 ಸಂಚಿಕೆ : 133 ☎ 08192-254736 ✆ 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




# ವೈಚಾರಿಕ ಕ್ರಾಂತಿಕಾರ, ಕೃಷಿ ದಾಸೋಹಿ

## 32ನೇ ಶ್ರದ್ಧಾಂಜಲಿ ಸಭೆಯಲ್ಲಿ ತರಳಬಾಳು ಹಿರಿಯ ಜಗದ್ಗುರು ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಸ್ಮರಣೆ

ಸಿರಿಗೆರೆ, ಸೆ. 24 - ತರಳಬಾಳು ಹಿರಿಯ ಜಗದ್ಗುರು ಲಿಂ. ಶ್ರೀ ಶಿವಕುಮಾರ ಸ್ವಾಮೀಜಿ ಅವರು ವೈಚಾರಿಕ ಕ್ರಾಂತಿಕಾರಿ, ಕೃಷಿ ದಾಸೋಹಿ, ಸಾಮಾಜಿಕ ಸಾಧಕ ಎಂದು ಅವರ 32ನೇ ಶ್ರದ್ಧಾಂಜಲಿ ಸಭೆಯಲ್ಲಿ ಗಣ್ಯರು ಪ್ರಶಂಸಿಸಿ ನುಡಿ ನಮನ ಸಲ್ಲಿಸಿದರು.

ಸಿರಿಗೆರೆ ಮಠದಲ್ಲಿ ಆಯೋಜಿಸಲಾಗಿದ್ದ ಹಿರಿಯ ಜಗದ್ಗುರುಗಳ 32ನೇ ಶ್ರದ್ಧಾಂಜಲಿ ಸಭೆಯ ಅಂತಿಮ ದಿನದ ಸಭಾ ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಮಾತನಾಡಿ, ಸಿರಿಗೆರೆ ಮಠವನ್ನು ಹಿರಿಯ ಜಗದ್ಗುರುಗಳು ಹೆಮ್ಮರವಾಗಿ ಬೆಳೆಸಿದ್ದಾರೆ ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಸಿರಿಗೆರೆ ಮಠದ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಹಿರಿಯ ಜಗದ್ಗುರುಗಳು ಕವಿ ಹೃದಯ, ಕೋಮಲ ಮನಸ್ಸಿನವರಾಗಿದ್ದರು. ಆದರೆ, ಮಠಕ್ಕೆ ಬಂದ ಮೇಲೆ ಸಮಾಜದ ಜೊತೆ ಹೊಡೆದಾಡುವ ಸಮಯ ಬಂದಾಗ ದಿಟ್ಟತನದ ನಿಲುವು ತೆಗೆದುಕೊಳ್ಳಬೇಕಾಯಿತು. ಆತ್ಮನಿವೇದನೆ ಪುಸ್ತಕದಲ್ಲಿ ಅವರ ಅಂತರಂಗದ ಭಾವನೆಗಳು ಅಭಿವ್ಯಕ್ತವಾಗಿವೆ. ದಿಟ್ಟ ಹೆಜ್ಜೆ - ಧೀರ ಗುರು ಪುಸ್ತಕದಲ್ಲಿ ಬಹಿರಂಗದ ಹೋರಾಟದ ವಿವರಗಳಿವೆ ಎಂದರು.

ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಮಾತನಾಡಿ, ತಿಥಿ - ಪಂಚಾಂಗ ಇತ್ಯಾದಿಗಳನ್ನು ತೊಡೆದು ಹಾಕಿದ್ದ ಹಿರಿಯ ಜಗದ್ಗುರುಗಳು ವೈಚಾರಿಕ ಕ್ರಾಂತಿ ಮಾಡಿದ್ದರು. ಮಕ್ಕಳ ಬಯಸಿ ಬಂದವರಿಗೆ ಬೈದು ವೈದ್ಯರ ಬಳಿ ಕಳಿಸುತ್ತಿದ್ದರು. ಸಮಾಜ ವಿರೋಧ ಮಾಡಿದರೂ ಲೆಕ್ಕಿಸದೇ ದಲಿತರ ಜೊತೆ ಸಹಭೋಜನ ಮಾಡಿದ್ದರು ಎಂದು ಹೇಳಿದರು.

ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಹಿರಿಯ ಜಗದ್ಗುರುಗಳು ಸಂಸ್ಕಾರ ಹಾಗೂ ಸಂಸ್ಕೃತಿ ಕಲಿಸಿದ್ದಾರೆ. ಗ್ರಾಮೀಣ ಜನರು, ರೈತರ ನೋವುಗಳಿಗೆ ಸ್ಪಂದಿಸಿದ್ದಾರೆ. ಹೀಗಾಗಿ ಮಠ ಜನರ ಮನಸ್ಸಿನಲ್ಲಿ ಗಟ್ಟಿಯಾಗಿ ಬೇರೂರಿದೆ ಎಂದರು.

ಹಿರಿಯ ಜಗದ್ಗುರುಗಳು ಆರ್ಥಿಕ, ರಾಜಕೀಯ ಹಾಗೂ ವ್ಯವಹಾರಿಕವಾಗಿ ಸಮಾಜವನ್ನು (2ನೇ ಪುಟಕ್ಕೆ)

### ಸಿರಿಗೆರೆ ಶ್ರೀಗಳು ರಾಜಗುರು ಇದ್ದಂತೆ

ಸರ್ಕಾರ ಯಾವುದೇ ಇದ್ದರೂ, ಸಿರಿಗೆರೆ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಸರ್ಕಾರಕ್ಕೆ ರಾಜಗುರು ಇದ್ದಂತೆ. ಸರ್ಕಾರದ ಕಿವಿ ಹಿಂಡಿ ಜನರ ಕೆಲಸ ಮಾಡಿಸುವ ಶಕ್ತಿ ಅವರಿಗಿದೆ ಎಂದು ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಹೇಳಿದರು. ಶ್ರೀಗಳು ಮಠಕ್ಕಾಗಿ ಏನೂ ಕೇಳುವುದಿಲ್ಲ. ರೈತರು ನೆಮ್ಮದಿಯ ಜೀವನ ನಡೆಸಲು ಅಗತ್ಯವಾದ ರಸ್ತೆ, ನೀರು, ವಿದ್ಯುತ್, ಗುಣಮಟ್ಟದ ಬೀಜ - ಗೊಬ್ಬರ, ಬೆಳೆಗೆ ವೈಜ್ಞಾನಿಕ ಬೆಲೆ ಸಿಗಬೇಕು ಎಂಬುದು ಅವರ ಆಶಯ ಎಂದರು.

### ನೀರಿನ ಗ್ಯಾರಂಟಿಯಿಂದ ಬದುಕಿನ ಗ್ಯಾರಂಟಿ

ರೈತರಿಗೆ ನೀರೇ ಬಂಗಾರವಿದ್ದಂತೆ. ರೈತರಿಗೆ ನೀರು ಸಿಕ್ಕಿದರೆ ಸಮೃದ್ಧಿಯ ಜೀವನ ಕಾಣಲು ಸಾಧ್ಯ, ಸಿರಿವಂತರಾಗಲು ಸಾಧ್ಯ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಹೇಳಿದರು. ರೈತರಿಗೆ ನೀರಿನ ಗ್ಯಾರಂಟಿ ಕೊಟ್ಟರೆ, ಬದುಕಿನ ಗ್ಯಾರಂಟಿ ಕೊಟ್ಟಂತೆ. ಸಾಸ್ವೆಹಳ್ಳಿ, ಭರಮಸಾಗರ ಹಾಗೂ ಜಗಳೂರು ಏತ ನೀರಾವರಿ ಸೇರಿದಂತೆ ಹಲವು ಏತ ನೀರಾವರಿ ಯೋಜನೆಗಳು ಈ ಮಾತಿಗೆ ಸಾಕ್ಷಿಯಾಗಿವೆ ಎಂದರು.

### ಕಲಾಪ ಯೂಟ್ಯೂಬ್‌ಗೆ ಬರಬಾರದು

ನ್ಯಾಯಾಲಯದ ಕಲಾಪಗಳು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಮೂಲಕ ಹಲವರ ಆಕ್ಷೇಪಗಳಿಗೆ ಕಾರಣವಾಗಿದ್ದನ್ನು ಗಮನಿಸಿರುವುದಾಗಿ ಸಿರಿಗೆರೆ ಮಠದ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಕೋರ್ಟ್ ಕಲಾಪಗಳನ್ನು ಈ ರೀತಿ ಬಹಿರಂಗ ಪಡಿಸಬಾರದು. ಅದರಲ್ಲೂ ಕೌಟುಂಬಿಕ ವ್ಯಾಜ್ಯಗಳು ಜಾಲತಾಣಗಳ ಮೂಲಕ ಹರಡಿದರೆ, ಸಂತ್ರಸ್ತರಿಗೆ ವೇದನೆಯಾಗುತ್ತದೆ. ಅರ್ಜಿದಾರರ ಖಾಸಗಿ ಜೀವನದ ಬಗ್ಗೆ ವಿವಾದಾತ್ಮಕವಾಗಿ ಬಹಿರಂಗ ಚರ್ಚೆಯಾಗಬಾರದು. ಅಂತಹ ಬಿಗಿ ಕಾನೂನಿನ ಅಗತ್ಯವಿದೆ ಎಂದು ಶ್ರೀಗಳು ಅಭಿಪ್ರಾಯ ಪಟ್ಟರು.

# ಮುಡಾ: ಮುಖ್ಯಮಂತ್ರಿಗೆ ಮುಖಭಂಗ

## ರಾಜ್ಯಪಾಲರ ಪ್ರಾಸಿಕ್ಯೂಷನ್ ಅನುಮತಿ ನಿರ್ಧಾರ ಎತ್ತಿ ಹಿಡಿದ ಹೈ ಕೋರ್ಟ್

ಬೆಂಗಳೂರು, ಸೆ. 24 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನ ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ಕರ್ನಾಟಕ ಹೈಕೋರ್ಟ್, ರಾಜ್ಯಪಾಲರು ನೀಡಿದ್ದ ಪ್ರಾಸಿಕ್ಯೂಷನ್ ಅನುಮತಿ ನಿರ್ಧಾರವನ್ನು ಎತ್ತಿಹಿಡಿದಿದೆ.

ರಾಜಭವನದ ನಿರ್ಧಾರ ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ, ಇಂದು ಮಹತ್ವದ ತೀರ್ಪು ಪ್ರಕಟಿಸಿದ್ದು, ಮುಡಾ ವಿವಾದ ಕುರಿತ ವಿಚಾರಣೆಗೆ ಅನುಮತಿ ನೀಡಿದಂತಾಗಿದೆ.

ಮುಖ್ಯಮಂತ್ರಿ ಅವರ ರಿಟ್ ಅರ್ಜಿ ಮೇಲೆ ಆರು ದಿನಗಳ ವಾದ - ಪ್ರತಿವಾದವನ್ನು ಸೆ.12ರಂದು ಮುಗಿಸಿ, ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಪೀಠ ಇಂದು ಪ್ರಕಟಿಸಿತು.

ಸಿದ್ದರಾಮಯ್ಯ ವಿರುದ್ಧ ಖಾಸಗಿ ದೂರುದಾರರು ಅನುಮತಿ ಕೋರಿದ್ದರೂ, ರಾಜ್ಯಪಾಲರು ಸಂವಿಧಾನದ ವಿಧಿ 17ಎ ಅಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದು ಸರಿಯಾಗಿದೆ. ತನಿಖೆ ಎದುರಿಸಲಿ, ಹಿಂಜರಿಕೆ ಏಕೆ? ಎಂದು ತನ್ನ 197 ಪುಟಗಳ ತೀರ್ಪಿನಲ್ಲಿ ನ್ಯಾಯಪೀಠ ತಿಳಿಸಿದೆ.

ಸಚಿವ ಸಂಪುಟದ ಶಿಫಾರಸ್ಸನ್ನು ರಾಜ್ಯಪಾಲರು ತಿರಸ್ಕರಿಸಿದ್ದು ಕಾನೂನು ಬದ್ಧವಾಗಿದ್ದು, ಅವರು ವಿವೇಚನೆ ಬಳಸಿದ್ದಾರೆ ಎಂದು ಹೇಳುವ ಮೂಲಕ ಹೈಕೋರ್ಟ್, ರಿಟ್ ಅರ್ಜಿಯನ್ನು ವಜಾಗೊಳಿಸಿತು.



ಸಿದ್ದರಾಮಯ್ಯ, ರಾಜ್ಯಪಾಲರ ತೀರ್ಮಾನವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿದ ನಂತರ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹಿರಿಯ ನ್ಯಾಯವಾದಿಗಳು ಪರ ಮತ್ತು ವಿರೋಧ ವಾದ ಮಂಡಿಸಿದ್ದರು.

ಮುಖ್ಯಮಂತ್ರಿ ಪರ ವಾದ ಮಂಡಿಸಿದ ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಪಾತ್ರ ಏನಿತ್ತೆಂಬುದನ್ನು ರಾಜ್ಯಪಾಲರು ತಿಳಿಸಿಲ್ಲ. ನಮ್ಮ ಕಕ್ಷಿದಾರರು ಅಧಿಕಾರದ ವಿವಿಧ ಹುದ್ದೆಗಳಲ್ಲಿ ಇದ್ದರೂ, ಎಂದೂ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ತಮ್ಮ ಕುಟುಂಬ ವರ್ಗಕ್ಕೆ ನಿವೇಶನ ಪಡೆಯುವ ಕೆಲಸ ಮಾಡಲಿಲ್ಲ ಎಂದು ಹೇಳಿದ್ದರು. (4ನೇ ಪುಟಕ್ಕೆ)

### ಮುಡಾ ಪ್ರಕರಣದ ಯಾವುದೇ ತನಿಖೆಗೆ ಸಿದ್ಧ : ಸಿದ್ಧರಾಮಯ್ಯ

ಬೆಂಗಳೂರು, ಸೆ. 24 - ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ತನಿಖೆಗೆ ಸಿದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ತಮ್ಮ ವಿರುದ್ಧ ನ್ಯಾಯಾಲಯ ತೀರ್ಪು ಹೊರಬೀಳುತ್ತಿದ್ದಂತೆಯೇ, ಈ ಸಂಬಂಧ ಸುದೀರ್ಘ ಪತ್ರಿಕಾ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಅವರು, ಕಾನೂನಿನಡಿ ಯಾವ ತನಿಖೆಗೆ ಅವಕಾಶ ಇದೆ - ಇಲ್ಲ ಎಂಬ ಬಗ್ಗೆ ಸಮಾಲೋಚಿಸುತ್ತೇನೆ ಎಂದಿದ್ದಾರೆ.

ಅವರು ನೀಡುವ ಸಲಹೆ ಮುಂದಿಟ್ಟುಕೊಂಡು ಕಾನೂನಿನ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದಿದ್ದಾರೆ.


ನ್ಯಾಯಾಲಯ ಸೆಕ್ಷನ್ 218ರ ಅಡಿ ರಾಜ್ಯಪಾಲರು ನೀಡಿದ್ದ ಅಭಿಯೋಜನೆಯನ್ನು ತಿರಸ್ಕರಿಸಿದೆ. ಕೇವಲ 17ಎ ಗೆ ಮಾತ್ರ ನ್ಯಾಯಮೂರ್ತಿಗಳು ತಮ್ಮ ತೀರ್ಪನ್ನು ಸೀಮಿತಗೊಳಿಸಿದ್ದಾರೆ.

ದೂರುದಾರ, ಬಿಎನ್‌ಎಸ್‌ಎಸ್ ಸೆಕ್ಷನ್ 218, 17 ಎ ಮತ್ತು 19 ಪಿಸಿ ಕಾಯಿದೆ ಪ್ರಕಾರ ತನಿಖೆ ಹಾಗೂ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿದ್ದರು. ಆದರೆ, ರಾಜ್ಯಪಾಲರು ಪ್ರಾಥಮಿಕ ಹಂತದಲ್ಲಿ 19 ಪಿಸಿ ಕಾಯಿದೆ ಪ್ರಕಾರ ಕೇಳಿದ್ದ ಅಭಿಯೋಜನಾ ಅನುಮತಿ ನಿರಾಕರಿಸಿದ್ದರು.

ಬಿಎನ್‌ಎಸ್‌ಎಸ್ ಸೆಕ್ಷನ್ 218ರ ಪ್ರಕಾರ ರಾಜ್ಯಪಾಲರು ನೀಡಿರುವ ಅಭಿಯೋಜನಾ ಅನುಮತಿಯನ್ನು ಘನ ನ್ಯಾಯಾಲಯ ಸ್ಪಷ್ಟವಾಗಿ ತಳ್ಳಿ ಹಾಕಿದೆ. ಆದೇಶ ಪ್ರತಿ ಪಡೆದು ಓದಿದ ಬಳಿಕ ಪ್ರತಿಕ್ರಿಯೆ (2ನೇ ಪುಟಕ್ಕೆ)

# ಲೋಕಸಭಾ ಚುನಾವಣೆಯಲ್ಲಿ ಫಲ ನೀಡದ ಗ್ಯಾರಂಟಿ

## ಸತ್ಯ ಶೋಧನಾ ಸಮಿತಿ ಸಭೆಯಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ



ದಾವಣಗೆರೆ, ಸೆ.24- ಇಲ್ಲಿನ ಪಕ್ಷೇತರ ಅಭ್ಯರ್ಥಿ ಕಾಂಗ್ರೆಸ್ಸಿನ ಮತಗಳನ್ನು ಕಬಳಿಸಿದ್ದರೂ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸಂಘಟಿತರಾಗಿ ಪಕ್ಷ ಗೆಲ್ಲಿಸಿರುವುದನ್ನು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ ಶ್ಲಾಘಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ 'ಸತ್ಯ ಶೋಧನಾ ಸಮಿತಿಯ ಸಭೆ'ಯಲ್ಲಿ ಅವರು ಮಾತನಾಡಿದರು.

ಪಂಚ ಗ್ಯಾರಂಟಿಗಳಿಂದ ವಿಧಾನಸಭಾ ಚುನಾವಣೆಯಲ್ಲಿ 135 ಸ್ಥಾನ ಗೆದ್ದೆವು. ಆದರೆ ಲೋಕಸಭಾ ಚುನಾವಣೆಯಲ್ಲಿ ಗ್ಯಾರಂಟಿಗಳು ಕೆಲಸ ಮಾಡಲಿಲ್ಲ. ಇದಕ್ಕೆ ಕಾರಣವೇ, ಬಿಜೆಪಿ ಅಸ್ತಿತ್ವದಲ್ಲಿರುವ ಗ್ರಾಮ್ ಒನ್ ಕೇಂದ್ರದ ವ್ಯಕ್ತಿಗಳು, ಅವರು ಗ್ಯಾರಂಟಿ ಯೋಜನೆ ಕುರಿತು ಮಾಡಿದ ಅಪಪ್ರಚಾರದಿಂದ ಪಕ್ಷಕ್ಕೆ ಹಿನ್ನಡೆ ಆಯಿತು ಎಂದರು.

ಕಳೆದ 25 ವರ್ಷಗಳಲ್ಲಿ ಹಿಂದಿನ ಸಂಸದರಿಂದ ಪಾರ್ಲಿಮೆಂಟ್‌ನಲ್ಲಿ ದಾವಣಗೆರೆ ಸಮಸ್ಯೆಗಳ ಬಗ್ಗೆ ಧ್ವನಿ ಕೇಳಿಸಿದ್ದಿಲ್ಲ. ಆದರೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಗೆಲುವು ಸಾಧಿಸಿದ ಕೆಲವೇ ದಿನಗಳಲ್ಲಿ ಪಾರ್ಲಿಮೆಂಟ್‌ನಲ್ಲಿ ಈ ಕ್ಷೇತ್ರದ ಸಮಸ್ಯೆ ಕುರಿತು ಮಾತನಾಡಿದ್ದಾರೆ ಎಂದು ಹೆಮ್ಮೆ ಪಟ್ಟರು.

ಒಗ್ಗಟ್ಟಿನಿಂದ ಕೆಲಸ ಮಾಡಿದ್ದಕ್ಕೆ ಪಕ್ಷಕ್ಕೆ ಫಲ ದೊರೆತಿದ್ದು, ದಾವಣಗೆರೆಯಲ್ಲಿ ಹೊಸ ಶಕೆ ಪ್ರಾರಂಭವಾಗಿದೆ ಎಂದ ಅವರು, ಶೋಧನೆ ಸಮಿತಿಗೆ ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ವರದಿ ಮಂಡನೆ ಮಾಡಲಿದ್ದೇವೆ ಎಂದು ಹೇಳಿದರು.

ಕೆಪಿಸಿಸಿ ಸತ್ಯ ಶೋಧನಾ ಸಮಿತಿಯ ಸದಸ್ಯ ಎಂ.ವೈ. ಘೋರ್ಪಡೆ ಮಾತನಾಡಿ, ಡಿಸಿಸಿ ಮತ್ತು ಎಂಎಲ್‌ಎ ಗಳ ಮಟ್ಟದಲ್ಲಿ ಪಕ್ಷ ಬಲಿಷ್ಠ ಪಡಿಸಿಕೊಂಡು, (2ನೇ ಪುಟಕ್ಕೆ)

# ಗಲಾಟೆಗೆ ನಿಮಿಷ, ಚೇತರಿಕೆಗೆ 15 ವರ್ಷ




### 1991ರ ಘಟನೆಯಲ್ಲಿ ಭಾಗಿಯಾದ ಯಾರೂ ಉದ್ಧಾರ ಆಗಿಲ್ಲ : ಸೌಹಾರ್ದ ಸಭೆಯಲ್ಲಿ ಎಸ್ಸೆಸ್ಸೆಂ

ದಾವಣಗೆರೆ, ಸೆ. 24 - 1991ರಲ್ಲಿ ಒಂದು ಕ್ಷಣದ ಘಟನೆಯಿಂದ ಗಲಾಟೆಯಾಗಿ ನಗರದ ವ್ಯವಹಾರಕ್ಕೆ ವರ್ಷಗಳ ಕಾಲ ನಷ್ಟವಾಗಿತ್ತು. ಈಗ ಮತ್ತೆ ಗಲಾಟೆಯಾದರೆ ವ್ಯವಹಾರಗಳು ಬೇರೆ ಊರುಗಳ ಪಾಲಾಗಿ ಬಡವರು ಸಂಕಷ್ಟಕ್ಕೆ ಗುರಿಯಾಗಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಎಚ್ಚರಿಸಿದ್ದಾರೆ.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನಡೆದ ದಾವಣಗೆರೆ ನಗರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ನಾಗರಿಕ ಸೌಹಾರ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

1991ರ ಘಟನೆಯಿಂದ ನಗರದ ದೊಡ್ಡ ಪಾಲಿನ ವ್ಯವಹಾರ ರಾಣೇಬೆನ್ನೂರಿಗೆ ವರ್ಗಾವಣೆಯಾಯಿತು. ಚೇತರಿಸಿಕೊಳ್ಳಲು 15 ವರ್ಷಗಳೇ ಬೇಕಾಯಿತು. ಇದರಿಂದಾಗಿ ಬಡವರೇ ಕಷ್ಟ ಎದುರಿಸಬೇಕಾಯಿತು ಎಂದು ಸಚಿವರು ಹೇಳಿದರು.

1991ರಲ್ಲಿ ಆದ ಘಟನೆ ಹಾಗೂ ಅದರ ಪರಿಣಾಮಗಳನ್ನು ನೋಡಿದ್ದೇನೆ. ಆಗಿನ ಗಲಾಟೆಯಲ್ಲಿ ಭಾಗಿಯಾದ ಹುಡುಗರನ್ನು ಬಂಧಿಸಿದಾಗ, ನೆರವಿಗೆ ಯಾರೂ ಬರಲಿಲ್ಲ. ಬಂಧಿತರು ವರ್ಷಗಟ್ಟಲೇ ಬಳ್ಳಾರಿ ಜೈಲು ಸೇರಿದರು. ಅವರು ಹಾಗೂ ಅವರ ಕುಟುಂಬದ ಯಾರೂ ಉದ್ಧಾರ ಆಗಿಲ್ಲ ಎಂದು ಮಲ್ಲಿಕಾರ್ಜುನ್ ಹೇಳಿದರು.

ಮೊನ್ನೆ ಅರಳೀಮರದ ವೃತ್ತದಲ್ಲಿ ನಡೆದ ಘಟನೆಯಲ್ಲೂ ಏನೂ ಗೊತ್ತಿರದ ಹುಡುಗರನ್ನು ಗಲಾಟೆ ಮಾಡಲು ಬಿಟ್ಟಿದ್ದರು. ಇವರು ಕಷ್ಟಕ್ಕೆ ಸಿಲುಕಿದಾಗ ಬಿಡಿಸಲು ಯಾರೂ ಬರುವುದಿಲ್ಲ ಎಂದು ಸಚಿವರು ತಿಳಿಸಿದರು.

ಕೆಲವು ಕಿಡಿಗೇಡಿಗಳಿಂದ ಸಮಸ್ಯೆಯಾಗುತ್ತಿದೆ. ಇಂತಹ ಕಿಡಿಗೇಡಿಗಳಿಗೆ ಸ್ಥಳೀಯ ಮುಖಂಡರು ಕಡಿವಾಣ ಹಾಕಬೇಕು. ಈ ಹಿಂದಿನಂತೆ ಎಲ್ಲರೂ ಒಗ್ಗಟ್ಟಾಗಿರಬೇಕು ಎಂದವರು (4ನೇ ಪುಟಕ್ಕೆ)

### ಒಂದೇ ದಿನದಲ್ಲಿ ಗಣಪತಿ ವಿಸರ್ಜನೆ

ಮುಂಬೈ ಹಾಗೂ ಪುಣೆ ನಗರಗಳಲ್ಲಿ ಒಂದೇ ದಿನ ಎಲ್ಲಾ ಗಣಪತಿಗಳ ವಿಸರ್ಜನೆಯಾಗುತ್ತದೆ. ಆದರೆ, ನಮ್ಮಲ್ಲಿ ಒಂದೇ ರಸ್ತೆಯಲ್ಲಿರುವ ಗಣಪತಿಗಳು ಬೇರೆ ಬೇರೆ ದಿನ ವಿಸರ್ಜನೆಯಾಗುತ್ತಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಆಕ್ಷೇಪಿಸಿದರು.

ನಮ್ಮಲ್ಲಿಯೂ ಒಂದೇ ದಿನದಲ್ಲಿ ಗಣಪತಿ ವಿಸರ್ಜನೆ ಮಾಡುವ ಹೊಸ ನಿಯಮ ಮಾಡಬೇಕಿದೆ. ಉಡುಪಿಯಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತಂದಿರುವ ರೀತಿಯಲ್ಲೇ, ಇಲ್ಲೂ ಕ್ರಮ ತೆಗೆದುಕೊಳ್ಳಬೇಕಿದೆ ಎಂದು ತಿಳಿಸಿದರು.

ಅಲ್ಲದೇ, ಬಾವುಟ ಕಟ್ಟುವ ಬಗ್ಗೆ ಚಕಮಕಿ ನಡೆಯುತ್ತಿದೆ. ಯಾವುದೇ ಬಾವುಟ ಕಟ್ಟುವಂತಿಲ್ಲ ಎಂಬ ನಿರ್ಬಂಧ ಜಾರಿಗೆ ತರಲಾಗುವುದು. ಈ ಬಗ್ಗೆ ಯಾವುದೇ ಮುಲಾಜಿಲ್ಲದೇ ಪೊಲೀಸರು ಕ್ರಮ ತೆಗೆದುಕೊಳ್ಳಬೇಕು ಎಂದು ಸಚಿವರು ಸೂಚನೆ ನೀಡಿದರು. ಇದೇ ವೇಳೆ, ನಗರದಲ್ಲಿ ಸಿ.ಸಿ.ಟಿ.ವಿ. ನಿಗಾ ಇನ್ನಷ್ಟು ಹೆಚ್ಚಾಗಬೇಕು. ಇದರಿಂದಾಗಿ ಅಪರಾಧ ಪ್ರಕರಣಗಳು ಇನ್ನಷ್ಟು ನಿಯಂತ್ರಣಕ್ಕೆ ಬರಲಿವೆ ಎಂದೂ ಸಚಿವರು ತಿಳಿಸಿದರು.

# ದಸರಾ ನಂತರ ಸಿದ್ದರಾಮಯ್ಯ ರಾಜೀನಾಮೆ ?

ಬೆಂಗಳೂರು, ಸೆ. 24 - ದಸರಾ ಹಬ್ಬದ ನಂತರ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆ ಇದೆ.

ಮುಡಾ ಹಗರಣದಲ್ಲಿ ನ್ಯಾಯಾಲಯದ ತೀರ್ಪು ಹೊರಬೀಳುತ್ತಿದ್ದಂತೆ ಕಾನೂನು ತಜ್ಞರು ಹಾಗೂ ತಮ್ಮ ಆಪ್ತರ ಜೊತೆ ಸಮಾಲೋಚನೆ ನಡೆಸಿದ ಸಿದ್ದರಾಮಯ್ಯ, ಕೇಂದ್ರ ಬಿಜೆಪಿ ನನ್ನನ್ನು ಕುಣಿಕೆಗೆ ಸಿಲುಕಿಸಿದೆ ಎಂದು ಕಿಡಿಕಾರಿದ್ದಾರೆ.

ವಿಭಾಗೀಯ ಪೀಠದ ಮುಂದೆ ಏಕದಸ್ಯ ಪೀಠದ ತೀರ್ಪಿಗೆ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ.

ಈಗಾಗಲೇ ತಮ್ಮ ವಿರುದ್ಧ ಅರ್ಜಿದಾರರು ವಿಭಾಗೀಯ ಪೀಠದ ಮುಂದೆ ಕೇವಿಯಟ್ ಸಲ್ಲಿಸಿದ್ದು, ಇದರಿಂದ ವಿಚಾರಣೆ ಮತ್ತು ತೀರ್ಪು (4ನೇ ಪುಟಕ್ಕೆ)


ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

ಸಾಬೂನು ತಯಾರಿಕೆಯಲ್ಲಿ ವಿಶ್ವದಲ್ಲಿಯೇ ಹೆಸರು ಗಳಿಸಿರುವ ಹಾಗೂ ಶತಮಾನೋತ್ಸವವನ್ನು ಪೂರೈಸಿರುವ ಕರ್ನಾಟಕ ಸರ್ಕಾರದ ಹೆಮ್ಮೆಯ ಸಂಸ್ಥೆ ಎಂಬ ಖ್ಯಾತಿಗೆ ಪಾತ್ರವಾಗಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ರಿಯಾಯಿತಿ ದರದಲ್ಲಿ ತನ್ನ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸುತ್ತಿದೆ.

ಇಂದು ಕೊನೆ ದಿನ

ರಿಯಾಯಿತಿ ದರದಲ್ಲಿ

ಶುದ್ಧ ನೈಸರ್ಗಿಕ ಶ್ರೀಗಂಧದೆಣ್ಣೆಯುಕ್ತ ಉತ್ಕೃಷ್ಟ ಗುಣಮಟ್ಟದ ಉತ್ಪನ್ನಗಳ

ಮೈಸೂರ್ ಸ್ಯಾಂಡಲ್

ಸಾಬೂನು ಮೇಳ

ದಿನಾಂಕ : 25.09.2024

ಸಮಯ: ಬೆಳಿಗ್ಗೆ 10.00 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ

ಸ್ಥಳ: ಶ್ರೀಮದ್ ಅಭಿನವ ರೇಣುಕಾ ಮಂದಿರ, ದಾವಣಗೆರೆ




ಪರಂಪರಾಗತ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ಅಂದಿನ ಮೈಸೂರು ಸಂಸ್ಥಾನದ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ದೂರದೃಷ್ಟಿಯ ಫಲ. ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ ಪ್ರಗತಿ ಕಂಡು ವಿಶ್ವದಾದ್ಯಂತ ತನ್ನ ಶ್ರೀಗಂಧದ ಕಂಪನ್ನು ಪಸರಿಸುತ್ತಿದೆ. ಈ ಸದೃಢ ಕಾರ್ಯತತ್ಪರತೆ ಮತ್ತು ಸನ್ಮಾರ್ಗಗಳಿಂದಾಗಿ ಸಂಸ್ಥೆಯು ನೈಜ ಮತ್ತು ಪರಿಶುದ್ಧ ಶ್ರೀಗಂಧದ ಉತ್ಪನ್ನಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿದೆ.

ಭಾರತ ಸರ್ಕಾರದಿಂದ ಮೈಸೂರು ಸ್ಯಾಂಡಲ್ ಸಾಬೂನು ಮತ್ತು ಶ್ರೀಗಂಧದೆಣ್ಣೆ ತಯಾರಿಕೆಯ ಭೌಗೋಳಿಕ ಅಸ್ತಿತ್ವದ ಮಾಲೀಕತ್ವವನ್ನು (Geographical Indication Registry) ಗಳಿಸಿದ ಕೆಎಸ್‌ಡಿಎಲ್ ತನ್ನ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿಶಿಷ್ಟ ಮೌಲ್ಯವನ್ನು ಪಡೆದು, ಟ್ರೇಡ್ ಮಾರ್ಕ್ ಕಾನೂನಿನ ರಕ್ಷಣೆಗೆ ಒಳಪಟ್ಟಿದೆ. ಗುಣಮಟ್ಟಕ್ಕೆ ಸಂದ ISO 9001 ಪ್ರಮಾಣ ಪತ್ರ ಹಾಗೂ ಪರಿಸರ ಸ್ನೇಹಿ ಉತ್ಪನ್ನಗಳಿಗಾಗಿ ಸಂದ ISO 14001 ಪ್ರಮಾಣ ಪತ್ರಗಳು ಸಂಸ್ಥೆಯ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿವೆ. 2010ನೇ ಮತ್ತು 2019ನೇ ಸಾಲಿನ 'ಮುಖ್ಯಮಂತ್ರಿ ರತ್ನ' ಪ್ರಶಸ್ತಿಗೆ ಪಾತ್ರವಾಗಿರುವ ಕೆಎಸ್-ಡಿಎಲ್ ತನ್ನ ಗ್ರಾಹಕರಿಗೆ ಮತ್ತಷ್ಟು ಗುಣಮಟ್ಟದ ಉತ್ಪನ್ನಗಳನ್ನು ತಲುಪಿಸುವಲ್ಲಿ ಶ್ರಮಿಸುತ್ತಿದೆ.



ಚಿರಸ್ಮರಣೆ



ದಿ|| ದೊಗ್ಗಳ್ಳಿ ಮಲ್ಲಿಕಾರ್ಜುನಪ್ಪ

ನೀವು ನಮ್ಮನ್ನಗಲಿ ಇಂದಿಗೆ ಇಪ್ಪತ್ತು ವರ್ಷಗಳು ಕಳೆದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು.
ದಾವಣಗೆರೆ.



ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಭಾನುಮತಿ ಶಶಿಧರ್

ಬಾರದ ಲೋಕಕ್ಕೆ ತೆರಳಿದ ನಮ್ಮೆಲ್ಲರ ಪ್ರೀತಿಯ ಗೆಳತಿಗೆ ಭಾವಪೂರ್ಣ ಶ್ರದ್ಧಾಂಜಲಿ

ದುಃಖತಪ್ತ ಸ್ನೇಹ ವೃಂದ

• ಶ್ರೀಮತಿ ಟಿ.ಎಂ.ಸುಮಾ ಸದಾನಂದ್, • ಶ್ರೀಮತಿ ಅನುರಾಧ ರಮೇಶ್, • ಶ್ರೀಮತಿ ಜಯಶ್ರೀ ವಿಜಯಕುಮಾರ್, • ಶ್ರೀಮತಿ ಶೀಲಾಜೋಶಿ, • ಶ್ರೀಮತಿ ಲತಾ ಪ್ರಭು, • ಶ್ರೀಮತಿ ಆಶಾ ವಿಜಯಕುಮಾರ್, • ಶ್ರೀಮತಿ ಲತಾ ಮಾಲತೇಶ್, • ಶ್ರೀಮತಿ ಉಮಾ ಓಂಕಾರಪ್ಪ, • ಶ್ರೀಮತಿ ಮಧು ರವಿಪಲ್ಲಾಗಟ್ಟಿ, • ಶ್ರೀಮತಿ ಶಾಂತ ಓನೂಜಿರಾವ್, • ಶ್ರೀಮತಿ ವಿನುತಾ ವೀರೇಶ್, • ಶ್ರೀಮತಿ ರಾಜೇಶ್ವರಿ ಪ್ರಕಾಶ್ • ಶ್ರೀಮತಿ ಭಾವನ.

# ಶಿವ ವಿವಿಧೋದ್ದೇಶ ಸಹಕಾರ ಸಂಘಕ್ಕೆ 58.57 ಲಕ್ಷ ರೂ. ನಿವ್ವಳ ಲಾಭ

## ಹೊಳೆಸಿರಿಗೆರೆಯಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಡಾ. ಬಿ.ಚಂದ್ರಶೇಖರ್ ಸಂತಸ



ಮಲೇಬೆನ್ನೂರು, ಸೆ.24- ಪಟ್ಟಣದ ಪ್ರತಿಷ್ಠಿತ ಶಿವ ವಿವಿಧೋದ್ದೇಶ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಹೊಳೆಸಿರಿಗೆರೆ ಗ್ರಾಮದ ಶ್ರೀ ಕಲ್ಲೇಶ್ವರ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷ ಡಾ. ಬಿ.ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ಮೊನ್ನೆ ಜರುಗಿತು.

ಚಂದನ ಪ್ರಾರ್ಥಿಸಿದರು. ಸಂಘದ ನಿರ್ದೇಶಕ ಹಾಗೂ ವಕೀಲ ಹೆಚ್.ಬಿ. ಶಿವಕುಮಾರ್ ಅವರು ವಾರ್ಷಿಕ ಲೆಕ್ಕ ಪತ್ರಗಳನ್ನು ಮಂಡಿಸಿದರು.

ಅಟೆಂಡರ್ ಕೆ.ಶಂಭುಲಿಂಗ ಸಭೆಯ ವಿಷಯ ಸೂಚಿ ಓದಿದರೆ, ಪ್ರಥಮ ದರ್ಜೆ ಸಹಾಯಕ ಹೆಚ್.ಹನುಮಂತಪ್ಪ ಅವರು, 2023ರಲ್ಲಿ ಜರುಗಿದ ಮಹಾಸಭೆಯ ನಡಾವಳಿಗಳನ್ನು ಸಭೆಗೆ ತಿಳಿಸಿದರು. ಸಂಘದ ಉಪಾಧ್ಯಕ್ಷ ಜಿ.ಆಂಜನೇಯ ಅವರು ವಾರ್ಷಿಕ ವರದಿಯನ್ನು ಮಂಡಿಸಿದರು.

ಹೊಳೆಸಿರಿಗೆರೆ ಶಾಖೆಯ ಪ್ರಭಾರ ಕ್ಯಾಷಿಯರ್ ಎಂ.ಎಸ್.ಅಕ್ಷರ, ಲೆಕ್ಕ ಪರಿಶೋಧನಾ ವರದಿಯನ್ನು ಸಭೆಗೆ ಓದಿ ತಿಳಿಸಿದರು. ಮುಖ್ಯ ಕಚೇರಿಯ ದ್ವಿತೀಯ ದರ್ಜೆ ಸಹಾಯಕಿ ಕೆ.ಜಿ.ಅಕ್ಷತಾ ಅವರು, ಅನುಪಾಲನಾ ವರದಿಗೆ ಸಭೆಯ ಅನುಮೋದನೆ ಪಡೆದರು.

ಕಾರ್ಯದರ್ಶಿ ಜಿ.ಎಂ.ನಳಿನಾ ಅವರು, ಆಡಳಿತ ಮಂಡಳಿ ತಯಾರಿಸಿದ ಅಂದಾಜು ಆಯ-ವ್ಯಯ ಪತ್ರಿಕೆಗೆ ಮಹಾಸಭೆಯ ಮಂಜೂರಾತಿ ಪಡೆದರು. ನಿರ್ದೇಶಕ ಹೆಚ್.ಜಿ.ಚಂದ್ರಶೇಖರ್ ಅವರು, ನಿವ್ವಳ ಲಾಭ ವಿಭಾಗಣೆಯನ್ನು ತಿಳಿಸಿದರು.

ಇನ್ನೋರ್ವ ನಿರ್ದೇಶಕ ಕೆ.ಎಸ್. ರಂಗನಾಥ್ ಅವರು, ಲೆಕ್ಕ ಪರಿಶೋಧಕರ ನೇಮಕ ಮತ್ತು ಅವರಿಗೆ ಸಂಭಾವನೆ ವಿಷಯ ಪ್ರಸ್ತಾಪಿಸಿದಾಗ ಸಭೆ ಒಪ್ಪಿಗೆ ನೀಡಿತು. ನಿರ್ದೇಶಕ ಬೆಳ್ಳೂಡಿಯ ಗೌಡ್ರ ರವಿಶಂಕರ್ ಅವರು, ಹೊಳೆಸಿರಿಗೆರೆಯಲ್ಲಿ ಸಂಘದ ಶಾಖಾ ಕಟ್ಟಡ ನಿರ್ಮಾಣದ ಯೋಜನೆ ಬಗ್ಗೆ ತಿಳಿಸಿದರು.

ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ಡಾ. ಬಿ.ಚಂದ್ರಶೇಖರ್ ಮಾತನಾಡಿ, ಸಂಘವು 75.81 ಲಕ್ಷ ರೂ. ಗಳನ್ನು ಪಾಲುಧನ ಹೊಂದಿದ್ದು, 3.05 ಕೋಟಿ ರೂ. ನಿಧಿಗಳನ್ನು ಮತ್ತು 9.11 ಕೋಟಿ ರೂ. ಠೇವಣಿಗಳನ್ನು ಹೊಂದಿದೆ.

ಈ ವರ್ಷದಲ್ಲಿ ಸದಸ್ಯರಿಗೆ 10.07 ಕೋಟಿ ರೂ. ಸಾಲ ಸೌಲಭ್ಯ ಕಲ್ಪಿಸಿದ್ದು, 58.57 ಲಕ್ಷ ರೂ.ನಿವ್ವಳ ಲಾಭ ಹೊಂದಿದೆ ಎಂದರು.

ಸಂಘವು ಮಲೇಬೆನ್ನೂರಿನಲ್ಲಿ ಮುಖ್ಯ ಕಚೇರಿಗೆ ಸುಸಜ್ಜಿತವಾದ ಸ್ವಂತ ಕಟ್ಟಡ ಮತ್ತು ಕುಂಬಳೂರು ಬಳಿ 2 ಎಕರೆ ಜಮೀನು ಹೊಂದಿದ್ದು, ಹೊಳೆಸಿರಿಗೆರೆಯಲ್ಲಿರುವ ಸಂಘದ ನಿವೇಶನದಲ್ಲಿ ಶಾಖಾ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿದ್ದೇವೆ. ಅದಕ್ಕಾಗಿ ಸದಸ್ಯರು ಈ ವರ್ಷದ ಲಾಭಾಂಶ ನೀಡಬೇಕೆಂದು ಸಂಘದ ಹಿರಿಯ ನಿರ್ದೇಶಕ ಬಣಕಾರ ವಿರೂಪಾಕ್ಷಪ್ಪನವರು ಕೇಳಿದಾಗ ಸಭೆ ಒಪ್ಪಿಗೆ ನೀಡುವ ಮೂಲಕ ಸಂಘದ ಪ್ರಗತಿ ಸಹಕರಿಸಿದ್ದೀರಿ ಎಂದು ಡಾ. ಬಿ. ಚಂದ್ರಶೇಖರ್ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

ಹೊಳೆಸಿರಿಗೆರೆಯ ಹಿರಿಯ ಮುಖಂಡ ಎನ್.ಜಿ.ನಾಗನಗೌಡ್ರು, ಡಿಸಿಸಿ ಬ್ಯಾಂಕಿನ ಮಾಜಿ ಅಧ್ಯಕ್ಷ ಬಿ.ಹಾಲೇಶಪ್ಪ, ನಿಟ್ಟೂರಿನ ಎನ್.ಜಿ.ಶಿವಾಜಿ ಪಾಟೀಲ್, ಸಂಘದ ಹಿರಿಯ ನಿರ್ದೇಶಕ ಬಣಕಾರ ವಿರೂಪಾಕ್ಷಪ್ಪ ಮಾತನಾಡಿದರು.

ನಿರ್ದೇಶಕರಾದ ಶ್ರೀಮತಿ ಸರೋಜಮ್ಮ ಭರಮಗೌಡ, ಶ್ರೀಮತಿ ನಾಗರತ್ನ ಧನಂಜಯ, ಹೆಚ್.ಷಣ್ಮುಖಪ್ಪ, ಜಿ.ಡಿ. ರಮೇಶ್, ಎ.ದೇವೇಂದ್ರಪ್ಪ, ಎಸ್.ಸಿದ್ದೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಹನಗವಾಡಿ ಕುಮಾರ್, ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ವಿಶ್ವಬಂಧು ಸೊಸೈಟಿ ಅಧ್ಯಕ್ಷ ಯಲವಟ್ಟಿ ಯೋಮಕೇಶ್ವರಪ್ಪ, ಮಲ್ಲನಾಯ್ಕನಹಳ್ಳಿ ಗೌಡ್ರಶೇಖರಪ್ಪ, ಚಿಟ್ಟಕ್ಕಿ ನಾಗರಾಜ್, ಕೆ.ಜಿ.ವೀರನಗೌಡ್ರು, ಹಳೇಮನಿ ಶಂಭುಲಿಂಗಪ್ಪ, ಎಂ.ಹೆಚ್. ಶಿವರಾಮಚಂದ್ರಪ್ಪ, ಕೆ.ಕುಬೇರಪ್ಪ, ಹಾಲಿವಾಣದ ಎಸ್.ಜಿ.ಹಾಲೇಶಪ್ಪ, ಸಿರಿಗೆರೆ ಮಲ್ಲೇಶಪ್ಪ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು.

ಈ ವೇಳೆ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಕೆ.ಜಿ.ಭೂಮಿಕಾ, ಕೆ.ಎನ್.ಸ್ವಪ್ನ, ಕೆ.ಪಿ. ನಂದಿನಿ ಹಾಗೂ ಎನ್.ಎಂ.ಅನನ್ಯ, ಡಿ. ತೇಜಸ್ವಿನಿ ಅವರನ್ನು ಸನ್ಮಾನಿಸಿ, ಪ್ರತಿಭಾ ಪುರಸ್ಕಾರ ನೀಡಲಾಯಿತು.

ಅತಿ ಹೆಚ್ಚು ಪಿಗ್ಮಿ ಸಂಗ್ರಹಣೆ ಮಾಡಿದ ಬೆಳ್ಳೂಡಿಯ ವಿಜಯಕುಮಾರ್, ಹೊಳೆಸಿರಿಗೆರೆಯ ರಾಜಶೇಖರ್ ಅವರನ್ನು ಮತ್ತು ಅತಿ ಕಡಿಮೆ ಸುಸ್ತಿ ಸಾಲವನ್ನು ಹೊಂದಿರುವ ಹನಗವಾಡಿ ಮಹೇಶ್, ಉಕ್ಕಡಗಾತ್ರಿ ಚಂದ್ರಶೇಖರ್ ಅವರನ್ನೂ ಈ ವೇಳೆ ಸನ್ಮಾನಿಸಲಾಯಿತು.

ಸಂಘದ ನಿರ್ದೇಶಕ ಹಾಗೂ ಪತ್ರಕರ್ತ ಜಿಗಳಿ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರೆ, ಸಂಘದ ವಿಶೇಷ ಆಹ್ವಾನಿತ ಸಿರಿಗೆರೆಯ ಬಿ.ಶೇಖರಪ್ಪ ವಂದಿಸಿದರು.

# ಕ್ರಾಂತಿಕಾರ, ಕೃಷಿ ದಾಸೋಹಿ

(1ನೇ ಪುಟದಿಂದ) ಗಟ್ಟಿಗೊಳಿಸಿದ್ದಾರೆ. ಅಮವಾಸ್ಯೆಯಂದು ಮದುವೆ ಹಾಗೂ ವಿಧವಾ ವಿವಾಹದ ಮೂಲಕ ಸಮಾಜವನ್ನು ಬದಲಾವಣೆಯ ದಾರಿಗೆ ತಂದಿದ್ದರು ಎಂದು ತಿಳಿಸಿದರು.

ಮಾಜಿ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ ಮಾತನಾಡಿ, ಹಿರಿಯ ಜಗದ್ಗುರುಗಳು ನುಡಿದಂತೆ ನಡೆದವರು. ಏನೇ ಟೀಕೆಗಳು ಎದುರಾದರೂ ಋಜು ಮಾರ್ಗ ಹಾಗೂ ಸಾತ್ವಿಕ ಮಾರ್ಗದಿಂದ ಎಂದೂ ಹಿಂದೆ ಸರಿದವರಲ್ಲ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡಿದ್ದ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮಾತನಾಡಿ, ಸಿರಿಗೆರೆ ಮಠವು ಧರ್ಮಪೀಠ, ನ್ಯಾಯಪೀಠ ಹಾಗೂ ಜ್ಞಾನ ಪೀಠದ ತ್ರಿವೇಣಿ ಸಂಗಮವಾಗಿದೆ ಎಂದು ಪ್ರಶಂಸಿಸಿದರು.

ಇದೇ ವೇಳೆ ಹಿರಿಯ ಜಗದ್ಗುರು ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ರಚಿಸಿರುವ ಆತ್ಮನಿವೇದನೆ ಹಾಗೂ ಸಂಕಲ್ಪ, ಅಕ್ಕಮಹಾದೇವಿ ಹಾಗೂ ಅಲ್ಲಮಪ್ರಭುದೇವರ ವಚನಗಳ ಹಿಂದಿ ಅನುವಾದ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಏತ ನೀರಾವರಿ ಯೋಜನೆ ಜಾರಿಯಲ್ಲಿ ಭಾಗಿಯಾಗಿದ್ದ ನೀರಾವರಿ ನಿಗಮದ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

ವೇದಿಕೆಯ ಮೇಲೆ ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ, ಉದ್ಯಮಿ ರಾಜು ಪಾಟೀಲ್, ಉದ್ಯಮಿ ಶ್ರೀನಿವಾಸ ಶಿವಗಂಗಾ, ಪಬ್ಲಿಕ್ ಪ್ರಾಸಿಕ್ಯೂಟರ್ ಸಾವಿತ್ರಿ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಸಿರಿಗೆರೆಯ ತರಳಬಾಳು ಜಗದ್ಗುರು ವಿದ್ಯಾ ಸಂಸ್ಥೆ ಆಡಳಿತಾಧಿಕಾರಿ ಹೆಚ್.ವಿ. ವಾಮದೇವಪ್ಪ ಸ್ವಾಗತಿಸಿದರು.

### ಸಮುದ್ರ ಸೇರುವ 100 ಟಿಎಂಸಿ ಬಳಸಿ

ತುಂಗಭದ್ರಾ ನದಿಯ 100 ಟಿಎಂಸಿ ನೀರು ವ್ಯರ್ಥವಾಗಿ ಸಮುದ್ರಕ್ಕೆ ಸೇರುತ್ತಿದೆ. ಈ ನೀರನ್ನು ನಮ್ಮ ಕಣಿವೆ ಭಾಗದ ಕೆರೆಗಳಿಗೆ ತುಂಬಿಸಿಕೊಳ್ಳಲು ಯಾವುದೇ ಕಾನೂನು ತೊಡಕಿಲ್ಲ ಎಂದು ನೀರಾವರಿ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ ಹೇಳಿದರು.

10-15 ವರ್ಷಗಳ ಹಿಂದೆ ಏತ ನೀರಾವರಿಗೆ ಸಮರ್ಪಕ ತಂತ್ರಜ್ಞಾನ ವಿಲ್ಲದೇ ಸಮಸ್ಯೆಯಾ ಗಿತ್ತು. ಈಗ ತಂತ್ರಜ್ಞಾನ ಲಭ್ಯವಿದೆ, ಈ ಯೋಜನೆಗಳ ಅನುಭವವೂ ಇದೆ. ಕೆರೆಗಳಿಗೆ ನೀರು ತುಂಬಿಸುವ ಸಮಗ್ರ ಯೋಜನೆ ಜಾರಿಗೆ ಬರಬೇಕಿದೆ ಎಂದರು.

# ಕೋಲ್ಕುಂಟೆ : ಅಂಗನವಾಡಿಗೆ ಶಾಸಕ ಬಸವಂತಪ್ಪ ಭೇಟಿ



ದಾವಣಗೆರೆ, ಸೆ. 24 - ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ಹಾಜರಾತಿ ಇಲ್ಲ. ಬೆಳಗ್ಗೆ ಮಕ್ಕಳು ಬಂದರೂ ಹಾಜರಾತಿ ಹಾಕಿಲ್ಲ. ಕಾರ್ಯಕರ್ತೆ ಬೆಳಿಗ್ಗೆ ಮಕ್ಕಳಿಗೆ ಊಟ ಕೊಟ್ಟು ಹಾಜರಿ ಪುಸ್ತಕದಲ್ಲಿ ಸಹಿ ಮಾಡಿ ಹೊರಗೆ ಹೋಗಿದ್ದರು. ಇದನ್ನು ಕಂಡು ಶಾಸಕ ಕೆ.ಎಸ್.ಬಸವಂತಪ್ಪ ಗರಂ ಆದರು.

ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಕೋಲ್ಕುಂಟೆ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಮಂಗಳವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಕ್ಕಳಿಗೆ ಕೊಡುವ ಊಟ, ಆಹಾರ ಧಾನ್ಯ ದಾಸ್ತಾನು, ಮಕ್ಕಳ ಸಂಖ್ಯೆಯನ್ನು ಪರಿಶೀಲಿಸಿದರು. ಈ ವೇಳೆ ಅಂಗನವಾಡಿ

### ಹಾಜರಿ ಹಾಕಿ ಹೋದ ಕಾರ್ಯಕರ್ತೆ ಬರಲೇ ಇಲ್ಲ !

ಕಾರ್ಯ ಕರ್ತೆ ಹಾಜರಿ ಹಾಕಿ ಹೊರ ಹೋಗಿದ್ದರು.

ಶಾಸಕರು ಕಾರ್ಯಕರ್ತೆ ಬರುವವರೆಗೂ ಕೇಂದ್ರದಲ್ಲಿ ಎರಡು ತಾಸು ಕಾದರು. ಆದರೆ ಕಾರ್ಯಕರ್ತೆ ಬರಲಿಲ್ಲ. ಇದರಿಂದ ಸಹಾಯಕಿಯನ್ನು ಶಾಸಕರು ತರಾಟೆಗೆ ತೆಗೆದುಕೊಂಡರು.

ಅಂಗನವಾಡಿ ಕೇಂದ್ರದಲ್ಲಿ ಮಕ್ಕಳು ಇದ್ದರೂ ಹಾಜರಿ ಹಾಕಿಲ್ಲ. ಮಕ್ಕಳಿಗೆ ತಿಳಿದಷ್ಟು ಆಹಾರ ಕೊಡಲಾಗುತ್ತಿದೆ. ಆಹಾರ ಧಾನ್ಯ ಸರಿಯಾಗಿ ವಿತರಣೆ ಆಗುತ್ತಿಲ್ಲ. ಅಲ್ಲದೇ ಸಣ್ಣ ಮಕ್ಕಳು ಕೇಂದ್ರದ ಹೊರಗಡೆ ಆಟ ಆಡುತ್ತಿದ್ದವು. ಪೋಷಕರು ಇವರನ್ನು ನಂಬಿ ಅಂಗನವಾಡಿ ಕೇಂದ್ರಕ್ಕೆ ಕಳುಹಿಸುತ್ತಾರೆ. ಮಕ್ಕಳಿಗೆ ಏನಾದರೂ ತೊಂದರೆಯಾದರೆ ಯಾರು ಹೊಣೆ ? ಎಂದು ಪ್ರಶ್ನಿಸಿದರು.

ಕೂಡಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಅಂಗನವಾಡಿ ಕೇಂದ್ರದಲ್ಲಿರುವ ಸಮಸ್ಯೆ ಬಗ್ಗೆ ವಿವರಿಸಿ ಕಾರ್ಯಕರ್ತೆ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಉಪಾಧ್ಯಕ್ಷೆ ಜಯಮ್ಮ, ಚಂದ್ರಪ್ಪ, ಅಣ್ಣಪ್ಪ, ಮಂಜಪ್ಪ, ಬಸಣ್ಣ, ಮುಖ್ಯ ಶಿಕ್ಷಕ ಚಂದ್ರಪ್ಪ ಹಾಗೂ ಗ್ರಾಮಸ್ಥರು ಹಾಜರಿದ್ದರು.

### ಸರ್ಕಾರಿ ಶಾಲೆಗೆ ಭೇಟಿ

ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ ಶಾಸಕ ಕೆ.ಎಸ್.ಬಸವಂತಪ್ಪ, ಶಿಕ್ಷಣದ ಗುಣಮಟ್ಟ ಪರಿಶೀಲಿಸಿದರು. ಇದೇ ವೇಳೆ ಸೆ.25ರಿಂದ ಮಕ್ಕಳಿಗೆ ಪ್ರತಿನಿತ್ಯ ಮೊಟ್ಟೆ ಮತ್ತು ಬಾಳೆಹಣ್ಣು ಕೊಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶ ಹೊರಡಿಸಿದ್ದು, ಯಾವುದೇ ರೀತಿ ಮಕ್ಕಳಿಗೆ ತೊಂದರೆ ಆಗದಂತೆ ಪ್ರತಿನಿತ್ಯ ಮೊಟ್ಟೆ, ಬಾಳೆಹಣ್ಣು ಕೊಡಬೇಕೆಂದು ಶಿಕ್ಷಕರಿಗೆ ಸೂಚನೆ ನೀಡಿದರು.

ಸರ್ಕಾರಿ ಶಾಲೆಯಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಆರಂಭಿಸಿದ್ದು, ಶಿಕ್ಷಕರು ಮಕ್ಕಳ ಹಾಜರಾತಿ ಹೆಚ್ಚಳ ಮಾಡಬೇಕು. ಯಾವುದೇ ಕಾರಣಕ್ಕೂ ಬಡ ಮಕ್ಕಳು ಶಿಕ್ಷಣದಿಂದ ವಂಚಿತ ರಾಗದಂತೆ ಶಿಕ್ಷಣ ಕೊಡುವ ಕೆಲಸ ಶಿಕ್ಷಕರು ಮಾಡಬೇಕೆಂದು ತಾಕೀತು ಮಾಡಿದರು.

# ಚುನಾವಣೆಯಲ್ಲಿ ಫಲ ನೀಡದ ಗ್ಯಾರಂಟಿ

(1ನೇ ಪುಟದಿಂದ) ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಉತ್ತಮ ಫಲಿತಾಂಶ ಲಭಿಸುವಂತೆ ಕೆಲಸ ಮಾಡಲು ಸೂಚಿಸಿದರು.

ಲೋಕಸಭಾ ಚುನಾವಣೆಯಲ್ಲಿ ಕಡಿಮೆ ಮತಗಳಿಂದ ಗೆದ್ದಿದ್ದೇವೆ. ಹಾಗಾಗಿ ಮುಂದಿನ ದಿನಗಳಲ್ಲಿ 1ಲಕ್ಷಕ್ಕೂ ಅಧಿಕ ಮತಗಳಿಂದ ಗೆಲುವು ಸಾಧಿಸುವ ನಿಟ್ಟಿನಲ್ಲಿ ಪಕ್ಷ ಬಲಿಷ್ಠ ಪಡಿಸುವ ಬಗ್ಗೆ ಚರ್ಚಿಸಬೇಕು ಎಂದು ತಿಳಿಸಿದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಮೈತ್ರಿ ಆಗಿರುವುದು ನಿಜ. ಆದರೆ ಉತ್ತಮ ಕಾರ್ಯ ಮಾಡಿದ ಎಂಎಲ್ಎ ಕ್ಷೇತ್ರಗಳಲ್ಲಿ ಪಕ್ಷದ ಬಾವುಟ ತಲೆ ಎತ್ತಿ ನಿಂತಿದೆ ಎಂದು ಹೇಳಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಮಾತನಾಡಿ, ಜಿಲ್ಲೆಯಲ್ಲಿ ಪಕ್ಷದ ಶಾಸಕರಿಂದ ಅಭಿವೃದ್ಧಿ ಕಾರ್ಯಗಳು ನಡೆದ ಕಾರಣ ಲೋಕಸಭಾ ಚುನಾವಣೆಯಲ್ಲಿ ಲಕ್ಷಕ್ಕೂ ಅಧಿಕ ಮತಗಳಿಂದ ಗೆಲ್ಲುವ ನಿರೀಕ್ಷೆ ಹೊಂದಿದ್ದೆವು ಆದರೆ ಪ್ರಚಾರದ ಕೊರತೆಯಿಂದ ಅಲ್ಪ ಮತಗಳಿಂದ ಜಯ ಸಿಕ್ಕಿದೆ ಎಂದು ಹೇಳಿದರು.

ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಸ್ಥಳೀಯ ಸಂಸ್ಥೆ ಚುನಾವಣೆಯ ನಾಯಕರು ತಮ್ಮ ವಾರ್ಡ್‌ಗಳಲ್ಲಿ ವಿಶೇಷ ಕಾರ್ಯಕ್ರಮ ಮಾಡುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರನ್ನು ಸೆಳೆಯುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, 1 ಲಕ್ಷ ಮತಗಳಿಂದ ಗೆಲ್ಲುವ ನಂಬಿಕೆ ಇತ್ತು. ಆದರೆ ಪಕ್ಷದಲ್ಲೇ ನಡೆದ ಕುತಂತ್ರದಿಂದ ಪಕ್ಷಕ್ಕೆ ಅಲ್ಪ ಮತಗಳು ಬಂದಿವೆ ಎಂದರು.

ಸ್ಥಳೀಯ ಸಂಸ್ಥೆಯ ಚುನಾವಣೆಯಲ್ಲಿ ಪಕ್ಷದ ಅಸ್ತಿತ್ವಕ್ಕೆ ಪ್ರಾಮಾಣಿಕ ಸೇವೆ ಮಾಡುತ್ತೇವೆ. ಮತ್ತು ಪಕ್ಷದ ತೊಡಕಿಗೆ ಕಾರಣರಾದ ಕೆಲವರ ಹೆಸರನ್ನು ಶಿಸ್ತು ಸಮಿತಿಗೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

### ಹೆಣದ ಮೇಲೆ ರಾಜಕೀಯ...

ಬಿಜೆಪಿಯವರು ಹಿಂದುತ್ವದ ವಿಚಾರದಲ್ಲಿ ಬಡವರ ಮಕ್ಕಳನ್ನು ಮುಂದೆ ಬಿಟ್ಟು, ಅವರ ಹೆಣದ ಮುಂದೆ ಭಾಷಣ ಬಿಗಿಯುತ್ತಾ ರಾಜಕೀಯ ಮಾಡುತ್ತಾರೆ.

ನಗರದಲ್ಲಿ ಮೊನ್ನೆ ನಡೆದ ಕೋಮು ಗಲಭೆಯು ನಾಗಮಂಗಲ ಸ್ವರೂಪ ಪಡೆಯುತ್ತಿತ್ತು. ಪೊಲೀಸ್ ಇಲಾಖೆಯ ನಿಯಂತ್ರಣದಿಂದ ಗಲಭೆ ಹತೋಟಿಗೆ ಬಂದಿತು.

- ದಿನೇಶ್ ಕೆ. ಶೆಟ್ಟಿ, ದೂಡಾ ಅಧ್ಯಕ್ಷ


### ನ್ಯೂಸ್ ಚಾನೆಲ್ ಹಾಗೂ ವ್ಯಾಟ್ಸ್‌ಆ್ಯಪ್ ನಿಯಂತ್ರಣಕ್ಕೆ ಸೂಚನೆ..!

ಸರ್ಕಾರಗಳು ಸುದ್ದಿ ಚಾನೆಲ್‌ಗಳನ್ನು ನಿಯಂತ್ರಣ ಮಾಡಬೇಕು. ಇವರಿಂದಲೇ ಜನರು ಹಾಳಾಗುತ್ತಿದ್ದಾರೆ.

ಆದ್ದರಿಂದ ಈ ಚಾನಲ್‌ಗಳು ಮತ್ತು ವ್ಯಾಟ್ಸ್‌ಆ್ಯಪ್ ಬಿಗಿ ಮಾಡಿದ್ರೆ ಯಾವ ಊರಲ್ಲೂ ಗಲಾಟೆಗಳು ಸಂಭವಿಸುವುದಿಲ್ಲ ಎಂದು ದಿನೇಶ್ ಕೆ. ಶೆಟ್ಟಿ ಹೇಳಿದರು.

ಈ ವೇಳೆ ಮುಖಂಡ ನಂದಿಗಾವಿ ಶ್ರೀನಿವಾಸ್, ಗ್ಯಾರಂಟಿ ಅನುಷ್ಠಾನದ ಅಧ್ಯಕ್ಷ ಬಸಣ್ಣ, ಜವಾಹರ ಲಾಲ್ ಬಾಲ್ ಮಂಚ್‌ನ ಮೈನುದ್ದಿನ್, ಎಸ್ಟಿ ಅಧ್ಯಕ್ಷ ಮಂಜುನಾಥ್, ಹದಡಿ ನಿಂಗಣ್ಣ, ಅನಿತಾ ಬಾಯಿ, ಶಂಷಿದ್, ಡೋಲಿ ಚಂದ್ರು, ರಾಘವೇಂದ್ರ ಹುಲಿಕಟ್ಟಿ, ದ್ರಾಕ್ಷಾಯಿಣಿ, ಮಂಗಳಮ್ಮ, ಅಕ್ಕಿ ರಾಮಚಂದ್ರ, ಸುರೇಶ್ ಕೋಗುಂಡೆ ಸೇರಿದಂತೆ ಪಕ್ಷದ ಮುಖಂಡರು ಕಾರ್ಯಕರ್ತರು ಇದ್ದರು.

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್ ದಾಸಕರಿಯಪ್ಪ ಅವರ ತಂದೆಯವರೂ, ದೂಡಾ ಮಾಜಿ ಅಧ್ಯಕ್ಷರೂ ಹಾಗೂ ದೇವಸ್ಥಾನ ಸಮಿತಿಯ ಹಿಂದಿನ ಸದಸ್ಯರೂ ಆದ

**ಶ್ರೀ ಟಿ. ದಾಸಕರಿಯಪ್ಪ**

ಅವರು, ದಿನಾಂಕ 22-09-2024ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಕಾರ್ಯದರ್ಶಿ, ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು
**ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ**
1ನೇ ಮುಖ್ಯರಸ್ತೆ, ವಿನೋಬನಗರ, ದಾವಣಗೆರೆ.

## ಲಾಲ್ ಕೋಟ್ ನರಸಿಂಹಮೂರ್ತಿ ನಿಧನ




ದಾವಣಗೆರೆ ಸಿಟಿ ಎಸ್.ಓ.ಜಿ. ಕಾಲೋನಿ 'ಎ' ಬ್ಲಾಂಕ್ 17ನೇ ಕ್ರಾಸ್ ವಾಸಿ ಲಾಲ್ ಕೋಟ್ ನರಸಿಂಹಮೂರ್ತಿ (77) ಇವರು ದಿನಾಂಕ : 24.09.2024ರ ಮಂಗಳವಾರ ಸಂಜೆ 7 ಗಂಟೆಗೆ ನಿಧನರಾದರು. ಪತ್ನಿ, ಮೂವರು ಪುತ್ರಿಯರುರು, ಮೂವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 25.09.2024ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಎಸ್.ಓ.ಜಿ. ಕಾಲೋನಿಯ ರುದ್ರಭೂಮಿಯಲ್ಲಿ ನೆರವೇರಲಿದೆ.

## ನಿಟ್ಟೂರು ಬಳಿ ಕುಸಿದ ರಸ್ತೆ ಸೇತುವೆ



ಮಲೇಬೆನ್ನೂರು, ಸೆ.24- ನಿಟ್ಟೂರಿನಿಂದ ಹರಳಹಳ್ಳಿ, ಮಲ್ಲನಾಯ್ಕನಹಳ್ಳಿ ಮತ್ತು ಯರಲಬನ್ನಿಕೊಡು ಗ್ರಾಮ ಸಂಪರ್ಕಿಸುವ ರಸ್ತೆಯ ಕಿರು ಸೇತುವೆ ಕುಸಿದು ಬಿದ್ದಿದ್ದು, ಹೊಲಗಳಿಗೆ ಓಡಾಡುವ ಸಾವಿರಾರು ರೈತರಿಗೆ ತೊಂದರೆ ಆಗಿದೆ. ಸಂಬಂಧಪಟ್ಟ ಇಲಾಖೆಯವರು ಕೂಡಲೇ ಸೇತುವೆ ದುರಸ್ತಿ ಮಾಡಿಸುವಂತೆ ನಿಟ್ಟೂರು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ನಗರದಲ್ಲಿ ನಾಳೆಯಿಂದ ಶ್ರೀ ಜಯದೇವ ಲೀಲೆ ಪ್ರವಚನ



ದಾವಣಗೆರೆ, ಸೆ. 24 - ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 68ನೇ ವರ್ಷದ ಸ್ಮರಣೋತ್ಸವ ಅಂಗವಾಗಿ ಶ್ರೀ ಜಯದೇವ ಲೀಲೆ ಪ್ರವಚನವು ನಾಡಿದ್ದು ದಿನಾಂಕ 26, 27, 28, 29 ರಂದು ಪ್ರತಿದಿನ ಸಂಜೆ 6.30 ಕ್ಕೆ ಶಿವಯೋಗಾಶ್ರಮದಲ್ಲಿ ನಡೆಯಲಿದೆ. ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವದಲ್ಲಿ ಶ್ರೀ ಮಹಾಂತೇಶ ಶಾಸ್ತ್ರೀ (ಸಂತೆಬೆನ್ನೂರು) ಅವರಿಂದ ಪ್ರತಿದಿನ ಪ್ರವಚನ ನಡೆಯಲಿದೆ. ಸ್ಮರಣೋತ್ಸವ ಸಮಾರಂಭವು ದಿನಾಂಕ 30ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಜರುಗಲಿದೆ. ರಥೋತ್ಸವ ಸೋಮವಾರ ಮಧ್ಯಾಹ್ನ 4 ಗಂಟೆಗೆ ಜರುಗಲಿದೆ.

## ಕೊಕ್ಕನೂರು ಗ್ರಾಮದ ಗಿರಿಜಾ ಪಾಟೀಲ್ ನಿಧನ



ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದ ವಾಸಿ ದಿ. ಕುಬೇರಗೌಡ ಪಾಟೀಲ್ ಅವರ ಪುತ್ರಿ


**ಶ್ರೀಮತಿ ಗಿರಿಜಾ ಪಾಟೀಲ್** (58 ವರ್ಷ)

ಅವರು ದಿನಾಂಕ 24.9.2024ರ ಮಂಗಳವಾರ ರಾತ್ರಿ 8.30ಕ್ಕೆ ಅನಾರೋಗ್ಯದಿಂದಾಗಿ ನಿಧನರಾದರು. ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 25.9.2024ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಕೊಕ್ಕನೂರಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು**

ಶ್ರೀಮತಿ ಶಕುಂತಲಮ್ಮ ಪ್ರಭುಗೌಡ ಪಾಟೀಲ್ ಮತ್ತು ಮಕ್ಕಳು ಕೊಕ್ಕನೂರು.
ಶ್ರೀಮತಿ ರೂಪಾ ದಿ. ಹಾಲನಗೌಡ ಪಾಟೀಲ್ ಮತ್ತು ಮಕ್ಕಳು ಕೊಕ್ಕನೂರು.
ಶ್ರೀಮತಿ ಶಾಂತಾ ಎನ್.ಆರ್. ಪ್ರಸನ್ನ ಕುಮಾರ್ ಮತ್ತು ಮಕ್ಕಳು, ಜಿಗಳಿ.
ಶ್ರೀಮತಿ ಶಾಂತಾ ದಿ. ಬಸವಲಿಂಗಪ್ಪಗೌಡ ಪಾಟೀಲ್ ಮತ್ತು ಮಕ್ಕಳು ಕೊಕ್ಕನೂರು.
ಶ್ರೀಮತಿ ವಿಮಲಾ ದಿ. ಶಿವಕುಮಾರ್ ಮತ್ತು ಮಕ್ಕಳು, ಕೊಕ್ಕನೂರು.
ಗೌಡ್ರ ವಂಶಸ್ಥರು ಹಾಗೂ ಕೊಕ್ಕನೂರು ಗ್ರಾಮಸ್ಥರು ಮತ್ತು ಬಂಧು-ಮಿತ್ರರು.

## ಭಾವಪೂರ್ಣ ಶ್ರದ್ಧಾಂಜಲಿ



ಲಯನ್ಸ್ ಕ್ಲಬ್‌ನ ಹಿರಿಯ ಸದಸ್ಯರೂ, ದಾವಣಗೆರೆ ಲಯನ್ಸ್ ಟ್ರಸ್ಟ್‌ನ ಟ್ರಸ್ಟಿಗಳೂ, ಲಯನ್ಸ್ ಭವನದ ಮೊದಲನೇ ಮಹಡಿಯ ಹಾಗೂ ಲಯನ್ಸ್ ಪಿಯು ಕಾಲೇಜಿನ ಪ್ರಮುಖ ದಾನಿಗಳಾದ

**ಲ. MJF ಬಿ.ವಿ. ಗಂಗಪ್ಪ ಶ್ರೇಷ್ಠಿ**

ಅವರು, ದಿನಾಂಕ 13-9-2024ರ ಶುಕ್ರವಾರ ದೈವಾಧೀನರಾಗಿದ್ದು, ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಮತ್ತು ಸದಸ್ಯರು
**ಲಯನ್ಸ್ ಕ್ಲಬ್, ದಾವಣಗೆರೆ.**
ಛೇರ್ಮನ್ ಹಾಗೂ ಟ್ರಸ್ಟಿಗಳು
**ದಾವಣಗೆರೆ ಲಯನ್ಸ್ ಟ್ರಸ್ಟ್**
ಛೇರ್ಮನ್ ಹಾಗೂ ಆಡಳಿತ ಮಂಡಳಿ
**ದಾವಣಗೆರೆ ಲಯನ್ಸ್ ಸ್ಕೂಲ್**

# ಸಿಎಂ ಸಿದ್ದರಾಮಯ್ಯರ ಪರ ನಿಲ್ಲೋಣ, ಷಡ್ಯಂತ್ರ ಕೊನೆಗಾಣಿಸೋಣ



### ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಕರೆ

ದಾವಣಗೆರೆ, ಸೆ. 24 - ಅಹಿಂದ ವರ್ಗದ ನಾಯಕ, ಮುಖ್ಯಮಂತ್ರಿ ಸಿದ್ದರಾಮಯ್ಯರ ಪರ ನಾವೆಲ್ಲರೂ ನಿಲ್ಲೋಣ. ಷಡ್ಯಂತ್ರ ಕೊನೆಗಾಣಿಸೋಣ. ರಾಜ್ಯದ ಜನರು ಸಿದ್ದರಾಮಯ್ಯರ ಪರ ನಿಲ್ಲಬೇಕಿದೆ ಎಂದು ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಕರೆ ನೀಡಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ದೇವರಾಜ ಅರಸು, ಎಸ್. ಬಂಗಾರಪ್ಪ, ವೀರಪ್ಪ ಮೊಯ್ಲಿ ಸೇರಿದಂತೆ ಹಿಂದುಳಿದ ವರ್ಗಗಳ ನಾಯಕರನ್ನು ತುಳಿಯುವ ಕೆಲಸ ಮೊದಲಿನಿಂದಲೂ ರಾಜ್ಯದಲ್ಲಿ ನಡೆದಿದೆ. ಹಿಂದುಳಿದ, ಅಲ್ಪಸಂಖ್ಯಾತ, ದಲಿತರು, ಬಡವರು ರಾಜಕೀಯವಾಗಿ ಮುಂದೆ ಬರ ಬಾರದೆನ್ನುವ ಹುನ್ನಾರ ಅಡಗಿರುವುದು ಸ್ಪಷ್ಟ. ಬಂಡವಾಳಶಾಹಿಗಳು, ಮೇಲ್ವರ್ಗದವರ ಪಿತೂರಿ ಸಿದ್ದರಾಮಯ್ಯರ ಪ್ರಕರಣದಲ್ಲಿ ಕಂಡು ಬರುತ್ತಿದೆ ಎಂದು ಅವರು ಹೇಳಿದ್ದಾರೆ.

## ಶ್ರೀಮತಿ ಗೌಡ್ರ ಯಶೋಧಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿ ಗ್ರಾಮದ ವಾಸಿ
**ಗೌಡ್ರ ಶಿವಕುಮಾರ್‌ರವರ ಧರ್ಮಪತ್ನಿ**

**ಶ್ರೀಮತಿ ಗೌಡ್ರ ಯಶೋಧಮ್ಮ** (64 ವರ್ಷ)

ಇವರು ದಿನಾಂಕ 24.9.2024ರ ಮಂಗಳವಾರ ಸಂಜೆ 7.36ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಮೂವರು ಪುತ್ರರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 25.9.2024ರ ಬುಧವಾರ ಮಧ್ಯಾಹ್ನ 2ಕ್ಕೆ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬದವರು : ಮೊ. : 98455 53034, 63621 92568**

# ತನಿಖೆಗೆ ಸಿದ್ಧ : ಸಿದ್ಧರಾಮಯ್ಯ

(1ನೇ ಪುಟದಿಂದ) ನೀಡುತ್ತೇನೆ. ಮುಂದಿನ ದಿನಗಳಲ್ಲಿ ಸತ್ಯ ಹೊರಬಂದು 17ಎ ಅಡಿ ನೀಡಿರುವ ತನಿಖೆ ರದ್ದಾಗಲಿದೆ ಎಂಬ ದೃಢ ವಿಶ್ವಾಸವಿದೆ ಎಂದರು.

ಬಿಜೆಪಿ-ಜೆಡಿಎಸ್‌ನ ಸೇಡಿನ ರಾಜಕೀಯದ ವಿರುದ್ಧ ನಮ್ಮ ನ್ಯಾಯಾಂಗದ ಹೋರಾಟ ಮುಂದುವರೆಯಲಿದೆ. ಇದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಸೇಡಿನ ರಾಜಕೀಯದ ವಿರುದ್ಧದ ಹೋರಾಟ. ನ್ಯಾಯಾಲಯದ ಮೇಲೆ ನಂಬಿಕೆ ಇದೆ ಎಂದಿದ್ದಾರೆ.

ನಮ್ಮ ಪಕ್ಷದ ಎಲ್ಲ ಶಾಸಕರು, ನಾಯಕರು, ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಹೈಕಮಾಂಡ್ ನನ್ನ ಪರವಾಗಿ ಭದ್ರವಾಗಿ ನಿಂತಿದ್ದು, ಕಾನೂನಿನ ಹೋರಾಟ ಮುಂದುವರೆಸುವಂತೆ ಉತ್ತೇಜನ ನೀಡಿದ್ದಾರೆ ಎಂದೂ ಅವರು ಹೇಳಿದ್ದಾರೆ. ನಾನು ಬಡವರ ಪರವಾಗಿದ್ದೇನೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿದ್ದೇನೆ ಎನ್ನುವ ಕಾರಣಕ್ಕಾಗಿ ನನ್ನ ವಿರುದ್ದ ಬಿಜೆಪಿ, ಜೆಡಿಎಸ್ ರಾಜಕೀಯ ಪ್ರತೀಕಾರಕ್ಕೆ ಇಳಿದಿವೆ.

ನನ್ನ 40 ವರ್ಷಗಳ ರಾಜಕೀಯ ಜೀವನದ ಉದ್ದಕ್ಕೂ ಇಂತಹ ಸೇಡು, ಸಂಚಿನ ರಾಜಕೀಯ ಎದುರಿಸಿದ್ದೇನೆ, ರಾಜ್ಯದ ಜನರ ಆಶೀರ್ವಾದ, ಹಾರೈಕೆಯ ಬಲದಿಂದ ಗೆಲ್ಲುತ್ತಾ ಬಂದಿದ್ದೇನೆ. ಈ ಹೋರಾಟವನ್ನು ಜನತೆಯ ಆಶೀರ್ವಾದದ ಬಲದಿಂದ ಗೆಲ್ಲುವ ವಿಶ್ವಾಸವಿದೆ ಎಂದು ಹೇಳಿದರು.

ಮುಡಾ ಪ್ರಕರಣ ಒಂದು ನೆಪ ಅಷ್ಟೇ, ಬಡವರು ಮತ್ತು ಶೋಷಿತರ ಪರವಾಗಿರುವ ನಮ್ಮ ಸರ್ಕಾರದ ಯೋಜನೆಗಳನ್ನು ನಿಲ್ಲಿಸಬೇಕೆಂಬುದೇ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮುಖ್ಯ ಉದ್ದೇಶ.

ಮುಡಾ ಪ್ರಕರಣ ಸೃಷ್ಟಿಸಿ, ಅದರ ಮೂಲಕ ಸುಳ್ಳು ಆರೋಪಗಳನ್ನು ಮಾಡುತ್ತಿರುವವರ ಮುಖಗಳನ್ನು ಒಮ್ಮೆ ರಾಜ್ಯದ ಜನತೆ ಸರಿಯಾಗಿ ನೋಡಬೇಕೆಂದು ನಾನು ಮನವಿ ಮಾಡುತ್ತೇನೆ ಎಂದಿದ್ದಾರೆ.

# ಬೆಳೆಗೆ ವೈಜ್ಞಾನಿಕ ಬೆಲೆ ನೀಡಲು ಕಿಸಾನ್ ಸಭಾ ಆಗ್ರಹ

### ಹರಪನಹಳ್ಳಿಯಲ್ಲಿ ಪ್ರತಿಭಟನೆ

ಹರಪನಹಳ್ಳಿ, ಸೆ.24- ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಮಾರುಕಟ್ಟೆ ಸೌಲಭ್ಯ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಖಿಲ ಭಾರತ ಕಿಸಾನ್ ಸಭಾದ ವತಿಯಿಂದ ಪ್ರತಿಭಟನೆ ನಡೆಸಿ, ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.




ಅಖಿಲ ಭಾರತ ಕಿಸಾನ್ ಸಭಾದ ತಾಲ್ಲೂಕು ಅಧ್ಯಕ್ಷ ಗುಡಿಹಳ್ಳಿ ಹಾಲೇಶ ಮಾತನಾಡಿ, ತಾಲ್ಲೂಕಿನ ರೈತರ ಬದುಕು ಇತಿಹಾಸದ ಉದ್ದಕ್ಕೂ ಆನಂದಮಯವಾಗಿಯೇನೂ ಇರಲಿಲ್ಲ. ಈ ತಾಲ್ಲೂಕಿನ ಕೃಷಿಯು ಶ್ರೇಣಿ ಕೃತ ಜಾತಿ ಪದ್ಧತಿಯೆಂಬ ಸಾಮಾಜಿಕ ವ್ಯವಸ್ಥೆಯ ಆಧಾರದಲ್ಲೇ ಉಳಿದು ಬೆಳೆದಿದೆ. ಈ ಶ್ರೇಣಿಯಲ್ಲಿ ಕೊನೆಯಂಚಿನಲ್ಲಿರುವ ರೈತಾಪಿಗಳಾಗಿದ್ದ ಹಿಂದುಳಿದ ಸಮುದಾಯಗಳ ಬದುಕು ಸಹ ಧಾರುಣವಾಗಿಯೇ ಇದೆ ಎಂದರು.

ನಮ್ಮ ತಾಲ್ಲೂಕಿನ ರೈತರು ಜೋಳ, ಮೆಕ್ಕೆಜೋಳ, ಭತ್ತ, ಹತ್ತಿ, ಶೇಂಗಾ, ಸೂರ್ಯ ಕಾಂತಿ ಬೆಳೆಯುತ್ತಿದ್ದಾರೆ. ವಾಡಿಕೆಯಂತೆ ಹೆಚ್ಚು ಮಳೆಯಾಗಿದೆ. ಕೆಲವು ಪ್ರದೇಶಗಳಲ್ಲಿ ಉತ್ತಮವಾದ ಫಸಲುಗಳು ಬಂದಿದ್ದು, ಇನ್ನು ಅನೇಕ ಪ್ರದೇಶಗಳಲ್ಲಿ ಹೆಚ್ಚು ಮಳೆಗೆ ಬೆಳೆ ನಾಶವಾಗಿರುತ್ತದೆ. ಹಾಗಾಗಿ ಸರ್ಕಾರಗಳು ಕೂಡಲೇ ರೈತರ ನೆರವಿಗೆ ಬರಬೇಕೆಂದು ಒತ್ತಾಯಿಸಿದರು.

ಸಂಘಟನೆಯ ಮುಖಂಡ ಬಳಿಗಾನೂರು ಕೊಟ್ರೇಶ್ ಮಾತನಾಡಿ, ಹರಪನಹಳ್ಳಿ ತಾಲ್ಲೂಕಿನ ರೈತರು ಬೆಳೆದ ಎಲ್ಲಾ ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ನೀಡಬೇಕು. ಹೋಬಳಿ ಮಟ್ಟದಲ್ಲಿ ಖರೀದಿ ಕೇಂದ್ರ ತೆರೆಯಬೇಕು. ರೈತರು ಹಾಗೂ ಕೃಷಿ ಕೂಲಿ ಕಾರ್ಮಿಕರಿಗೆ ಕೂಡಲೇ ಹೊಸ ಪಡಿತರ ಚೀಟಿ ನೀಡಬೇಕು. ಅರ್ಜಿ ಸಲ್ಲಿಸಲು ನಿರಂತರ ಅವಕಾಶ ನೀಡಬೇಕು ಎಂದರು.

ಸಂಘಟನೆಯ ರಾಗಿಮಸಲವಾಡ ಹನುಮಂತಪ್ಪ, ಹರಿಯಮ್ಮನಹಳ್ಳಿ ಬಸವರಾಜ, ಹಗರಿಗುಡಿಹಳ್ಳಿ ಶಿವರಾಮ್, ಹನುಮಂತ ನಾಯ್ಕ, ಪ್ರಭುಗೌಡ, ಬಳಿಗಾನೂರು ಪರಶುರಾಮ, ಕೋಟಿ ಭೀಮಪ್ಪ, ಧರ್ಮಣ್ಣ, ರಾಮಪ್ಪ ಸೇರಿದಂತೆ ಇತರರು ಇದ್ದರು.

# ಅಮಾಯಕ ಹಿಂದೂಗಳ ಬಿಡುಗಡೆಗೆ ವಿಹೆಚ್‌ಪಿ ಆಗ್ರಹ

ದಾವಣಗೆರೆ, ಸೆ.24- ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಹಿಂದೂಗಳ ಮೇಲೆ ದೌರ್ಜನ್ಯ ಘಟನೆಗಳು ಹೆಚ್ಚಾಗಿವೆ ಎಂದು ವಿಶ್ವ ಹಿಂದೂ ಪರಿಷತ್ ಜಿಲ್ಲಾ ಸಂಚಾಲಕ ಸಿ.ಎಸ್. ರಾಜು ಆರೋಪಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೂಗಳ ಮೇಲೆ ಇದೇ ರೀತಿ ದೌರ್ಜನ್ಯ ಮುಂದುವರೆದರೆ ಮುಂದಿನಗಳಲ್ಲಿ ದಾವಣಗೆರೆ ಬಂದ್ ಮಾಡಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಇತ್ತೀಚೆಗೆ ಗಣೇಶನ ಮೂರ್ತಿ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ನಡೆದ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಅಮಾಯಕ ಹಿಂದೂಗಳನ್ನು ಬಂಧಿಸಿದ್ದು, ಕೂಡಲೇ ಅವರನ್ನು ಬಿಡುಗಡೆಗೊಳಿಸಿ, ನೈಜ ಅಪರಾಧಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ವಿಶ್ವ ಹಿಂದೂ ಪರಿಷತ್‌ನ ಪ್ರಮುಖರಾದ ಕೆ.ಬಿ. ಶಂಕರನಾರಾಯಣ, ರವಿ ಮಲ್ಲೇಶ್, ವಿನಾಯಕ ರಾನಡೆ ಇನ್ನಿತರರು ಸುದ್ದಿಗೋಷ್ಠಿಯಲ್ಲಿದ್ದರು.

# ಲಕ್ಷ್ಮಣ್ ಅವರಿಗೆ ಪಿಎಚ್‌ಡಿ ಪದವಿ



ದಾವಣಗೆರೆ, ಸೆ. 24 - ಮಾಯಕೊಂಡದ ಶ್ರೀ ಬಸವೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಲಕ್ಷ್ಮಣ್ ಬಿ. ಹೆಚ್. ಅವರು, ಸಹ ಪ್ರಾಧ್ಯಾಪಕ ಡಾ. ರವಿ ಬಿ. ಅವರ ಮಾರ್ಗದರ್ಶನದಲ್ಲಿ 'ಅಗ್ರಿಕಲ್ಚರಲ್ ಸಪೋರ್ಟ್ ಸರ್ವೀಸಸ್ ಬೈ ಡಿಸಿಸಿಬಿ'ಸ್ ಇನ್ ಕರ್ನಾಟಕ ಇವ್ಯಾಲ್ಯುಯೇಟಿವ್ ಸ್ಟಡಿ' ಎಂಬ ವಿಷಯದ ಬಗ್ಗೆ ಮಂಡಿಸಿದ ಮಹಾ ಪ್ರಬಂಧಕ್ಕೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯವು (ಬಳ್ಳಾರಿ) ಪಿ.ಹೆಚ್.ಡಿ ಪದವಿ ಪ್ರದಾನ ಮಾಡಿದೆ.

# ಪೂರಕ ದಾಖಲೆ ಅಸಮಂಜಸ, ಚರ್ಚಿಸಿ ನಂತರ ತೀರ್ಮಾನ

## ಹರಿಹರ ತಾಲ್ಲೂಕು ಬಗರ್ ಹುಕ್ಕು ಸಮಿತಿ ಸಭೆಯಲ್ಲಿ ಶಾಸಕ ಬಿ.ಪಿ. ಹರೀಶ್

ಹರಿಹರ, ಸೆ.24- ಬಗರ್ ಹುಕ್ಕುಂ ಸಭೆ ಪ್ರಥಮ ಸಭೆಯಾಗಿರುವುದರಿಂದ ಹಲವಾರು ಗ್ರಾಮ ರೈತರ ಅರ್ಜಿಗಳ ವಿಚಾರಕ್ಕೆ ಸಂಬಂಧಿಸಿದಂತೆ ಬಹಳಷ್ಟು ಚರ್ಚೆಯ ವಿಚಾರಗಳಿಗೆ, ಅಲ್ಲದೇ ಅದಕ್ಕೆ ಪೂರಕವಾದ ದಾಖಲೆಗಳು ಸಮಂಜಸವಾಗಿ ಇರದೇ ಇರುವುದರಿಂದ ಅವುಗಳನ್ನು ಪರಿಶೀಲನೆ ನಡೆಸಲು ಸಮಯ ಬೇಕಾಗಿರುವುದರಿಂದ ಮುಂದಿನ 15 ದಿನದ ನಂತರ ಮತ್ತೊಮ್ಮೆ ಸಭೆಯನ್ನು ಆಯೋಜಿಸಿ ರೈತರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳೋಣ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.



ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲ್ಲೂಕಿನ ಬಗರ್ ಹುಕುಂ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ವೇಳೆ ರೈತ ದೇವೇಂದ್ರಪ್ಪ ಹಾಲಿವಾಣ ಮಾತನಾಡಿ ಗ್ರಾಮದ ಕಾರ್ಯದರ್ಶಿ ಅಣ್ಣಪ್ಪ ಎಂಬುವರು ಹಕ್ಕು ಪತ್ರ ನೀಡುವುದಾಗಿ 38ಕ್ಕು ಹೆಚ್ಚು ರೈತರಿಂದ 8 ರಿಂದ 10 ಸಾವಿರ ರೂಪಾಯಿ ಹಣವನ್ನು ಪಡೆದುಕೊಂಡು ವರ್ಷಾನುಗಟ್ಟಲೇ ಆದರೂ ಸಹ ಇದುವರೆಗೂ ಹಕ್ಕು ಪತ್ರವನ್ನು ನೀಡದೇ ರೈತರಿಗೆ ತೊಂದರೆ ನೀಡುತ್ತಿದ್ದಾರೆ. ಇವತ್ತು ಅದಕ್ಕೆ ಪರಿಹಾರ ಕಂಡುಕೊಳ್ಳಬಹುದು ಎಂಬ ಆಸೆಯಿಂದ ಸಭೆಗೆ ಬಂದರೆ ಶಾಸಕರು ವಿವಿಧ ಗ್ರಾಮಗಳಿಂದ ಬಂದು ಬೆಳಗ್ಗೆಯಿಂದ ಕಚೇರಿಯ ಹೊರಗಡೆ ಕಾದಿರುವ ರೈತರ ಸಮಸ್ಯೆಗಳನ್ನು ಆಲಿಸದೆ ತರಾತುರಿಯಲ್ಲಿ ಸಭೆಯನ್ನು ಮುಂದಿನ 15 ದಿನಗಳ ನಂತರ ಮಾಡಲಾಗುತ್ತದೆ ಎಂದು ತಿಳಿಸಿ ಸಭೆಯಿಂದ ದಿಢೀರ್ ಹೊರಗಡೆ ಹೋಗಿದ್ದು ಬಹಳಷ್ಟು ಬೇಸರ ತರಿಸಿದೆ ಎಂದು ಹೇಳಿದರು.

ಈ ವೇಳೆ ನೂತನ ಬಗರ್ ಹುಕ್ಕುಂ ಸದಸ್ಯರಾದ ಕರಿಬಸಪ್ಪ ಎಳಹೊಳೆ, ಚಂದ್ರಶೇಖರ್ ಹಳ್ಳಿಹಾಳ, ಸವಿತಾ ವಾಸನ ಮಾತನಾಡಿ, ನಾವು ಪ್ರಥಮ ಬಾರಿಗೆ ಸಭೆಗೆ ಆಗಮಿಸಿದ್ದು, ತಹಶೀಲ್ದಾರ್ ಮತ್ತು ಗ್ರಾಪಂ ವಿ.ಎ ರವರು ಯಾವ ಯಾವ ಗ್ರಾಮದ ರೈತರ ಅರ್ಜಿಗಳು ಬಂದಿವೆ ಎಂಬುದರ ಬಗ್ಗೆ ದಾಖಲೆಗಳ ಮೂಲಕ ಮಾಹಿತಿ ನೀಡಿದ್ದಾರೆ. ಅವುಗಳನ್ನು ಪರಿಶೀಲನೆ ನಡೆಸಿ, ನಂತರ ಮುಂದಿನ ಸಭೆಯಲ್ಲಿ ತಾಲ್ಲೂಕಿನ ಎಲ್ಲಾ ಗ್ರಾಮದ ರೈತರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗುರುಬಸವರಾಜ್, ಗ್ರಾಮ ಲೆಕ್ಕಾಧಿಕಾರಿ ಆನಂದ್, ಹೇಮಂತ್ ಕುಮಾರ್, ಸಮೀರ್, ಹೊಳಿಯಪ್ಪ, ರೇವಣಸಿದ್ದಪ್ಪ, ದೇವೇಂದ್ರಪ್ಪ, ಹಾಲಪ್ಪ, ನಾಗಪ್ಪ ಇತರರು ಹಾಜರಿದ್ದರು.

# ಸಿರಿಗೆರೆ ಮಠಕ್ಕೆ ಭಕ್ತಿಯೇ 'ಸಿರಿ'

ಸಿರಿಗೆರೆ, ಸೆ. 24 - ಭಕ್ತಿಯೇ ಶ್ರೀಮಂತಿಕೆ ಎಂದು ಬಸವಣ್ಣನವರು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಸಿರಿಗೆರೆ ಮಠವು ಭಕ್ತರ ಭಕ್ತಿಯ ಕಾರಣದಿಂದ ಶ್ರೀಮಂತವಾಗಿದೆ ಎಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.



> ಭಕ್ತಿ ಇರುವವರ ಮನೆ ಘನ ಸಂಪನ್ನ. ಭಕ್ತಿ ಇಲ್ಲದ ವ್ಯಕ್ತಿ ಬಡವ ಎಂದು ಬಸವಣ್ಣನವರು ವಚನಗಳಲ್ಲಿ ಹೇಳಿದ್ದರು. ನಮ್ಮ ಪ್ರಕಾರ ಅಂಥವರು ಕೇವಲ ಬಡವರಷ್ಟೇ ಅಲ್ಲದೇ, ಭಡವರು.
> - ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ಸಿರಿಗೆರೆ ಮಠದಲ್ಲಿ ಆಯೋಜಿಸಲಾಗಿದ್ದ ಹಿರಿಯ ಜಗದ್ಗುರು ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ 32ನೇ ಶ್ರದ್ಧಾಂಜಲಿ ಸಮಾರಂಭದ ಅಂತಿಮ ದಿನದ ಸಭಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಭಕ್ತಿ ಇರುವವರ ಮನೆ ಘನ ಸಂಪನ್ನ. ಭಕ್ತಿ ಇಲ್ಲದ ವ್ಯಕ್ತಿ ಬಡವ ಎಂದು ಬಸವಣ್ಣನವರು ವಚನಗಳಲ್ಲಿ ಹೇಳಿದ್ದರು. ನಮ್ಮ ಪ್ರಕಾರ ಅವರು ಕೇವಲ ಬಡವರಷ್ಟೇ ಅಲ್ಲದೇ, ಭಡವ ಎಂದರೂ ಸರಿ ಎಂದು ಶ್ರೀಗಳು ಮಾರ್ಮಿಕವಾಗಿ ಹೇಳಿದರು.

ಗುರುವಿಗೆ ಅಂಜಿ ಶಿಷ್ಯ, ಶಿಷ್ಯರಿಗೆ ಅಂಜಿ ಗುರು ಇರಬೇಕು ಎಂದು ಹಿರಿಯ ಜಗದ್ಗುರುಗಳು ಹೇಳಿದ್ದರು. ಮಠದ ಬಗ್ಗೆ ಕೋಲಾಹಲ ಎಬ್ಬಿಸಿದವರು ಈ ಮಾತನ್ನು ತಿರುಚಿ ಹೇಳುತ್ತಿದ್ದಾರೆ. ಅಂಜುವುದು ಎಂದರೆ ಹೆದರಿಕೆ ಅಲ್ಲ. ಅಂಜುವುದು ಎಂದರೆ ಭಕ್ತಿ ಎಂದರ್ಥ. ಗುರುಗಳ ಬಗ್ಗೆ ಶಿಷ್ಯರಿಗೆ ಭಕ್ತಿ ಇರಬೇಕು, ಅದೇ ರೀತಿ ಶಿಷ್ಯರ ಬಗ್ಗೆ ಗುರುಗಳಿಗೆ ಗೌರವ ಇರಬೇಕು ಎಂದರ್ಥ ಎಂದು ತರಳಬಾಳು ಜಗದ್ಗುರು ಹೇಳಿದರು.

ಹಿರಿಯ ಜಗದ್ಗುರುಗಳು ತಮ್ಮನ್ನು ಪೀಠಾಧೀಶರನ್ನಾಗಿ ಮಾಡುವಾಗ ಜನರ ಅಪವಾದಗಳಿಗೆ ಅಂಜಬೇಡ, ಪರನಿಂದನೆಗೆ ವ್ಯಾಕುಲಪಡಬೇಡ ಎಂದಿದ್ದರು. ಸ್ವಾರ್ಥಿಗಳು ತಮಗೆ ಏನಾದರೂ ಸಿಕ್ಕರೆ ಹೊಗಳುತ್ತಾರೆ, ಸಿಗದೇ ಇದ್ದರೆ ದೂಷಣೆ ಮಾಡುತ್ತಾರೆ. ಅವರ ಹೊಗಳಿಕೆಗೆ ಹಾಗೂ ನಿಂದನೆಗಳಿಗೆ ಬೆಲೆ ಇಲ್ಲ ಎಂದು ಹೇಳಿದ್ದರು ಎಂದು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ನೆನಪಿಸಿಕೊಂಡರು.

ಹಿರಿಯ ಜಗದ್ಗುರುಗಳು ನಮ್ಮನ್ನು ವಿದೇಶಕ್ಕೆ ವ್ಯಾಸಂಗಕ್ಕೆ ಕಳಿಸಿದಾಗ ಅವರನ್ನು ನಿಂದಿಸಿದವರಿದ್ದರು. ಹಿರಿಯ ಜಗದ್ಗುರುಗಳು ತ್ಯಾಗ ಪತ್ರ ಕೊಟ್ಟಿರುವುದು ಸೋಗು ಮಾತ್ರ. ವಿದೇಶಕ್ಕೆ ಹೋದವರು ವಾಪಸ್ ಬರುವುದಿಲ್ಲ, ಹೀಗಾಗಿಯೇ ಉತ್ತರಾಧಿಕಾರಿಯನ್ನು ವಿದೇಶಕ್ಕೆ ಕಳಿಸಿದ್ದಾರೆ ಎಂದಿದ್ದರು. ಅಂತಹ ಆರೋಪ ಮಾಡುತ್ತಿದ್ದವರ ಶನಿ ಸಂತಾನವೇ ಈಗ ಅಲ್ಲಲ್ಲಿ ಕಾಣುತ್ತಿದೆ ಎಂದರು.

ಅಂತರಂಗದ ಆತ್ಮಶುದ್ಧಿ ಇರುವವರು ಯಾರಿಗೂ ಹೆದರಬೇಕಿಲ್ಲ. ಸಮಾಜ ಸೇವೆ ಎಂದರೆ ಗುಡ್ಡಕ್ಕೆ ಕಲ್ಲು ಹೊತ್ತ ಹಾಗೆ ಎಂದು ಕೆಲವರು ಹೇಳುತ್ತಾರೆ. ಆದರೆ, ಅಷ್ಟೇ ಅಲ್ಲ, ಸಮಾಜ ಸೇವೆ ಮಾಡುವವರು ಗುಡ್ಡದಿಂದ ಬೀಳುವ ಕಲ್ಲುಗಳನ್ನು ಎದುರಿಸುವ ಛಾತಿ ಹೊಂದಿರಬೇಕು ಎಂದೂ ಶ್ರೀಗಳು ಹೇಳಿದರು.

ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್. ಆರ್. ಬಸವರಾಜಪ್ಪ ಮಾತನಾಡಿ, ಮಠದ ಬಗ್ಗೆ ಕೆಲವರು ಮಾಡಿರುವ ಸುಳ್ಳು ಆಪಾದನೆಗಳಿಗೆ ಜಗದ್ಗುರುಗಳು ಉತ್ತರಿಸಿದ್ದಾರೆ. ಸುಳ್ಳು ಆಪಾದನೆ ಮಾಡಿದವರಿಗೆ ದೇವರು ಒಳ್ಳೆಯ ಬುದ್ಧಿ ಕೊಡಲಿ ಎಂದರು.

ಮಾಜಿ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ ಮಾತನಾಡಿ, ಮಠದ ಭಿನ್ನಾಭಿಪ್ರಾಯಗಳು ಸಾರ್ವಜನಿಕವಾಗಿರುವುದು ನನಗೆ ನೋವು ತಂದಿದೆ. ಮುಂದಿನ ಶ್ರದ್ಧಾಂಜಲಿ ಸಮಾರಂಭದ ವೇಳೆ ಭಿನ್ನಾಭಿಪ್ರಾಯಗಳು ದೂರವಾಗಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ಕ್ರೀಡೆ, ವಿದ್ಯಾಭ್ಯಾಸ ನಾಣ್ಯದ ಎರಡು ಮುಖಗಳಿದ್ದಂತೆ


ದಾವಣಗೆರೆ, ಸೆ.24-ಜೀವನದಲ್ಲಿ ಕ್ರೀಡೆ ಮತ್ತು ವಿದ್ಯಾಭ್ಯಾಸ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ವಿದ್ಯಾರ್ಥಿಗಳು ಕ್ರೀಡೆ ಮತ್ತು ವಿದ್ಯಾಭ್ಯಾಸವನ್ನು ಸಮತೋಲನದಲ್ಲಿ ಕಾಯ್ದುಕೊಂಡು ಜೀವನವನ್ನು ಉತ್ತಮ ರೀತಿಯಲ್ಲಿ ನಿರೂಪಿಸಿಕೊಳ್ಳಬೇಕೆಂದು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹೇಳಿದರು.



ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಏರ್ಪಡಿಸಲಾಗಿದ್ದ 2024- 25 ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ಪದವಿ ಪೂರ್ವ ಕಾಲೇಜಿನಲ್ಲಿ ಉತ್ತಮ ದೈಹಿಕ ಶಿಕ್ಷಕರ ನೇಮಕಾತಿ ಆದರೆ ಮಕ್ಕಳಿಗೆ ಒಳ್ಳೆಯ ಕ್ರೀಡಾ ಪ್ರೋತ್ಸಾಹಕರು ದೊರೆತಂತಾಗಿ, ಮಕ್ಕಳು ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆಯುವಂತೆ ಪ್ರೋತ್ಸಾಹ ಸಿಕ್ಕಂತಾಗುತ್ತದೆ ಎಂದು ಹೇಳಿದರು.

ರಾಜನಹಳ್ಳಿ ಸೀತಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಟಿ.ಎ. ಕುಸಗಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್. ಜಿ. ಕರಿಬಸಪ್ಪ, ಮಹಾನಗರ ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಬಿ. ಪಾಲಾಕ್ಷಿ ಮತ್ತು ಇತರರು ಭಾಗವಹಿಸಿದ್ದರು.

# ಹೃದಯಪೂರ್ವಕ ಅಭಿನಂದನೆಗಳು


ದಾವಣಗೆರೆ ನಾಮದೇವ ಶಿಂಪಿ ಸಮಾಜದ ಅಧ್ಯಕ್ಷರಾಗಿ
ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿರುವ
ಮಾಜಿ ಮಹಾ ಪೌರರು ಹಾಗೂ ಮಹೇಂದ್ರಕರ್ ಟೆಕ್ಸ್‌ಟೈಲ್ಸ್‌ನ ಮಾಲೀಕರಾದ


**ಶ್ರೀ ವಿಠ್ಠಲ್ ಎಂ.ಎಸ್.**


ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.





ಶ್ರೀ ವಿಠ್ಠಲ ರುಕ್ಮಾಯಿ



ಜ್ಞಾನದೇವ ಬೊಂಗಾಳೆ
ಗೌರವಾಧ್ಯಕ್ಷರು


ಆರ್.ಕೆ. ಆನಂದರಾವ್
ಉಪಾಧ್ಯಕ್ಷರು


ಮನೋಹರ್ ವಿ. ಬೊಂಗಾಳೆ
ಪ್ರಧಾನ ಕಾರ್ಯದರ್ಶಿ


ಎ. ಪ್ರಭಾಕರ್
ಖಜಾಂಚಿ


ಐ.ಎನ್. ಮಂಜುನಾಥ್
ಸಂಘಟನಾ ಕಾರ್ಯದರ್ಶಿ


ಕೆ.ಜಿ.ಯಲ್ಲಪ್ಪ
ವಿಶ್ವ ಕರ್ನಾಟಕ ವೇದಿಕೆ ರಾಜ್ಯಾಧ್ಯಕ್ಷರು


ಆರ್. ವಿಠ್ಠಲ್
ಸಹ ಕಾರ್ಯದರ್ಶಿ



ಕಿರಣ್ ಕುಮಾರ್ ಎ.
ಚಾರ್ಟರ್ಡ್ ಅಕೌಂಟೆಂಟ್



ಮನೋಹರ್ ಎಸ್. ಬೊಂಗಾಳೆ
ಭಜನಾ ಮಂಡಳಿ ಅಧ್ಯಕ್ಷರು


ಕೆ.ಬಿ. ಪಾಂಡುರಂಗರಾವ್
ದೈವ ಮಂಡಳಿ ಸದಸ್ಯರು


ಮಹೇಂದ್ರಕರ್ ಮಲ್ಲಿಕಾರ್ಜುನ್
ದೈವ ಮಂಡಳಿ ಸದಸ್ಯರು


ಪ್ರೊ.ಬೊಂಗಾಳೆ ಪರಶುರಾಮ್‌ರಾವ್
ದೈವ ಮಂಡಳಿ ಸದಸ್ಯರು


ನಾಗರಾಜ್ ಎ. ಕಾಕಡೆ
ವಿಶೇಷ ಆಹ್ವಾನಿತರು


ಮಧುಕರ್ ಕೋಳೆಕರ್
ದೈವ ಮಂಡಳಿ ಸದಸ್ಯರು


ಪಿ. ಪರಶುರಾಮ್ (ಕೋಗಿಲೆ)
ದೈವ ಮಂಡಳಿ ಸದಸ್ಯರು


ಪ್ರಕಾಶ್‌ರಾವ್ ಮಹೇಂದ್ರಕರ್
ದೈವ ಮಂಡಳಿ ಸದಸ್ಯರು


ಅಶೋಕ್ ಮಾಳೋದೆ
ದೈವ ಮಂಡಳಿ ಸದಸ್ಯರು


ಕಿರಣ್ ಪಿಸೆ
ದೈವ ಮಂಡಳಿ ಸದಸ್ಯರು


ಎಂ.ಹೆಚ್. ಮಂಜುನಾಥ್ ರಾವ್
ದೈವ ಮಂಡಳಿ ಸದಸ್ಯರು


ಪಾಂಡುರಂಗ ಪೇಟ್‌ಕರ್
ದೈವ ಮಂಡಳಿ ಸದಸ್ಯರು


ಸುಮಂತ್ ಎಂ.ವಿ
(ಗಣೇಶ್)


ರಾಘವೇಂದ್ರ ಕಂಚಿಕೆರೆ
ದೈವ ಮಂಡಳಿ ಸದಸ್ಯರು


ಶ್ರೀಮತಿ ರೇಣುಕಾ ಬಾಯಿ ಪಿಸೆ
ದೈವ ಮಂಡಳಿ ಸದಸ್ಯರು


ಹೆಚ್.ಎನ್. ರಾಜ್
ದೈವ ಮಂಡಳಿ ಸದಸ್ಯರು


ಸುರೇಶ್ ಮಹೇಂದ್ರಕರ್
ದೈವ ಮಂಡಳಿ ಸದಸ್ಯರು


ಮಂಜುನಾಥ್ ಮಾಳೋದೆ
ದೈವ ಮಂಡಳಿ ಸದಸ್ಯರು


ಶಿವಶಂಕರ್ ಕೆ. ಕಾರ್ಯದರ್ಶಿ,
ನಾಮದೇವ ಹಾಸ್ಟೆಲ್

ಹಾಗೂ ದಾವಣಗೆರೆ ಸಮಸ್ತ ನಾಮದೇವ ಶಿಂಪಿ ಸಮಾಜ ಬಾಂಧವರು

## ಎಲ್ಲರ ಮನದಾಳದಲ್ಲಿ ಸದಾ ನೆನೆಯುವ ದೈವ

# ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ



ನಮ್ಮ ಭಾರತ ಪವಿತ್ರ ನಾಡು, ತತ್ವಾದರ್ಶಗಳ ನೆಲೆಬೀಡು. ಈ ಪುಣ್ಯಭೂಮಿಯಲ್ಲಿ ಹುಟ್ಟಿದ ಋಷಿಗಳು, ಮಹರ್ಷಿಗಳು, ತತ್ವಜ್ಞಾನಿಗಳು, ಶರಣರು, ದಾಸರು, ಸಾಧು-ಸಂತರು, ಸತ್ಪುರುಷರು ಮತ್ತು ಮಠಾಧಿಪತಿಗಳು ಗುರು ಸ್ಥಾನದಲ್ಲಿ ನಿಂತು ಜನರಲ್ಲಿ ಸದ್ಗುಣದ ಬೀಜಗಳನ್ನು ಬಿತ್ತಿ, ಜೀವನದ ಆದರ್ಶ ಮೌಲ್ಯಗಳನ್ನು ತಿಳಿಸುತ್ತಾ ಜ್ಞಾನಪ್ರಸಾರ ಮಾಡಿ ನಾಗರಿಕ ಸಮಾಜ ಕಟ್ಟುವಲ್ಲಿ ಅವರುಗಳ ಪಾತ್ರ ಅನನ್ಯವಾದದ್ದು, ಭಾರತದಲ್ಲಿ ಜ್ಞಾನದ ಅಧಿಪತಿಗಳಾದ ಗುರುಗಳಿಗೆ ಪವಿತ್ರ ಸ್ಥಾನವಿದೆ. ಗುರುಗಳನ್ನು ದೈವಾಂಶ ಸಂಭೂತರೆಂದು ಗೌರವಿಸಲಾಗುತ್ತಿದೆ. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ ಎಂಬ ಉಕ್ತಿಗಳು ಪ್ರಚಲಿತದಲ್ಲಿವೆ.

ಗುರುಗಳನ್ನು ಬ್ರಹ್ಮ ವಿಷ್ಣು ಮಹೇಶ್ವರರೆಂದು ಪೂಜಿಸಲಾಗುತ್ತಿದೆ. ಹರ ಮುನಿದರೂ ಗುರು ಕಾಯುವನು ಎನ್ನುವ ವಾಣಿ ಗುರುವಿನ ಮೂಲಕ ದೇವರನ್ನು ಕಾಣಬಹುದೆಂಬುದನ್ನು ತಿಳಿಸುತ್ತದೆ. 'ಅರಿತರೆ ಶರಣ ಮರೆತರೆ ಮಾನವ' ಎಂಬ ಶರಣರ ಮಾತಿದೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ದಾಸರವಾಣಿಗೆ ಪ್ರತಿರೂಪದಂತಿರುವ ಸಿರಿಗೆರೆಯ ಶ್ರೀರತ್ನ ತರಳಬಾಳು ಬೃಹನ್ಮಠದ 20ನೇ ಜಗದ್ಗುರು ಶ್ರೀ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ನಿಜಕ್ಕೂ ಎಲ್ಲಾ ಮಠಮಾನ್ಯಗಳಿಗೆ ಮಾದರಿಯಾಗಿದ್ದಾರೆ.

ಧರ್ಮದ ಉದ್ಧಾರಕ್ಕೆ ಸಜ್ಜನರ ರಕ್ಷಣೆಗೆ ದುಷ್ಟರ ನಿಗ್ರಹಕ್ಕೆ ಮತ್ತು ಧರ್ಮ ಪರಿಪಾಲನೆಗೆ ಯುಗಯುಗಗಳಲ್ಲೂ ಅವತಾರವೆತ್ತುತ್ತೇನೆ ಎಂದು ನುಡಿದ ಶ್ರೀ ಕೃಷ್ಣ ಪರಮಾತ್ಮನ ವಾಣಿಯಂತೆ ಹೊಳಲ್ಕೆರೆ ತಾಲ್ಲೂಕು ಮುತ್ತುಗದೂರಿನಲ್ಲಿ ಮುತ್ತಿನ ಮಣಿಯಂತೆ ಮೈ ವೆತ್ತು ಮುತ್ತುಗದೂರಿನ ಈ ಮುತ್ತು ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಗುರು ಪರಂಪರೆಯಲ್ಲಿ ಇಪ್ಪತ್ತನೇ ಜಗದ್ಗುರುಗಳಾಗಿ 78 ವರ್ಷಗಳ ಕಾಲ ಅತ್ಯಮೂಲ್ಯ ಜೀವನವನ್ನು ಸಾಗಿಸಿ ಸಹನೆಯ ಸಾಕಾರ ಮೂರ್ತಿಯಾಗಿ, ಸಮರ್ಥ ಗುರುವೆನಿಸಿ, ಚಾಣಾಕ್ಷ ಮಹಾಸ್ವಾಮಿಗಳೆನಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದಿ, ಜನಸಾಮಾನ್ಯರ ಒಳಗಣ್ಣು ತೆರೆಸಿದ ಮಹಾಗುರುಗಳಾಗಿ ತರಳಬಾಳು ಹುಣ್ಣಿಮೆ ಹಾಗೂ ಶರಣ ಸಮ್ಮೇಳನಗಳ ಮುಖೇನ ಜನಸಾಮಾನ್ಯರಲ್ಲಿ ಐಕ್ಯತೆಯ ಬೀಜ ಬಿತ್ತಿದ ಗುರು ಕಾರುಣ್ಯರಾಗಿ ಒಗ್ಗಟ್ಟಿನಲ್ಲಿ ಬಲವಿದೆ ಎಂದು ಸಾರಿದ ಸಮಾನತೆಯ ಹರಿಕಾರನಾಗಿ, ಸಮಾಜದಲ್ಲಿ ಧಾರ್ಮಿಕ ಭಾವನೆ ತುಂಬಿ, ಜನರ ಮನಸ್ಸಿನಲ್ಲಿ ಸ್ಥಾನ ಪಡೆದ ಹೃದಯ ಸಿಂಹಾಸನಾಧೀಶ್ವರ ಈ ಸಿರಿಗೆರೆಯ ಹಿರಿಯ ಗುರು ಎಲ್ಲರ ಮನದಾಳದಲ್ಲಿ ಸದಾ ನೆನೆಯುವ ದೈವವಾಗಿದ್ದಾರೆ.

ಅತ್ಯಲ್ಪ ಅವಧಿಯಲ್ಲಿ ಅದ್ಭುತ ಕ್ರಾಂತಿ ಮಾಡಿದ ನಿರ್ಮಲಾಂತಕರಣದ ಅಸೀಮ ಸಾಹಸಿ. 1914ರ ಏಪ್ರಿಲ್ 28ರಂದು ಹೊಳಲ್ಕೆರೆ ತಾಲ್ಲೂಕು ಮುತ್ತುಗದೂರು ಗ್ರಾಮದ ಮಹದೇವಯ್ಯ, ಬಸಮ್ಮ ದಂಪತಿಗೆ ಜನಿಸಿದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಪೂರ್ವಾಶ್ರಮದಲ್ಲಿ ರೇವಣಸಿದ್ದಯ್ಯ ಎಂಬ ಹೆಸರಿನಲ್ಲಿ ಮುತ್ತುಗದೂರು ಬೀರೂರು, ಬನಾರಸ್‌ನಲ್ಲಿ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಪಡೆದು, ಸುಸಂಸ್ಕೃತ ವ್ಯಕ್ತಿತ್ವ ರೂಪಿಸಿಕೊಂಡು ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ 19ನೇ ಜಗದ್ಗುರುಗಳಾಗಿದ್ದ ಶ್ರೀ ಗುರು ಶಾಂತದೇಶೀಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದದಿಂದ ಅವರ ಆದೇಶದಂತೆ ಶಿಕ್ಷಣವನ್ನು ಮೊಟಕುಗೊಳಿಸಿ 1933ರ ಆಗಸ್ಟ್ ಎರಡರಂದು ಯಲಹಂಕ ಮಠದ ಚರ ಪಟ್ಟಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಮಠದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿ ದಣಿವರಿಯದ ದಾರ್ಶನಿಕರಾಗಿ, ಜನತೆಯಲ್ಲಿ ದುಡಿಮೆಯ ಬೆಲೆಯನ್ನು ಅರ್ಥೈಸಿದ ಅಪ್ರತಿಮ ಧೀರ ಸನ್ಯಾಸಿ ಎನಿಸಿದ ಈ ಮೇರು ಚೈತನ್ಯ, ವ್ಯಕ್ತಿ ಎನಿಸದೆ ಶಕ್ತಿಯಾಗಿ ಬಾಳಿದರು. ಸಮಾಜದ ಬೆಳಕಾದರು, ಮಹಾ ಮಾನವತಾವಾದಿಯಾದರು.

ಸಮರ್ಥ ಗುರುವಾಗಿ ಸ್ವಾಮಿಗಳ ಸ್ವಾಮಿಗಳಾಗಿ, ಭಕ್ತ ವತ್ಸಲರೆನಿಸಿ, 1940ರ ಮೇ ತಿಂಗಳಿನಲ್ಲಿ ಬಸವ ಜಯಂತಿ ಯಂದು ಶ್ರೀ ಜಗದ್ಗುರು ಬೃಹನ್ಮಠದ ಅಧಿಪತಿಗಳಾಗಿ ಪಟ್ಟಾಭಿಷಿಕ್ತರಾದರು. ಶ್ರೀಮಠದ ಅಭಿವೃದ್ಧಿಗೆ ಹಗಲಿರುಳೆನ್ನದೆ ಶ್ರಮಿಸಿ ಮಠದ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ,ಎದೆಗುಂದದೆ ಧೈರ್ಯದಿಂದ ಎದುರಿಸಿ, ಎಲ್ಲರೂ ಮೂಗಿನ ಮೇಲೆ ಬೆರಳಿಡುವಂತೆ ಮಾಡಿ ಇಡೀ ನಾಡಿಗೆ ನಾಡೇ ಭೇಷ್ ಎಂದು ಉದ್ಘರಿಸುವಂತೆ ಮಾಡಿದ ಯುಗದ ಗುರುವಾಗಿ ಶಿಕ್ಷಣ ಪ್ರಸಾರ, ಉಚಿತ ಊಟ, ವಸತಿ, ಸಹಪಂಕ್ತಿ ಭೋಜನ, ಕೆರೆ-ಕಟ್ಟೆಗಳ ರಿಪೇರಿ, ತೋಟಗಳ ಕಾರ್ಯ ಶಿಕ್ಷಣ ಸಂಸ್ಥೆಗಳ ಆರಂಭ, ವಸತಿ ನಿಲಯಗಳ ಸ್ಥಾಪನೆ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ, ಹೆಣ್ಣು ಮಕ್ಕಳ ಜ್ಞಾನಾರ್ಜನೆಗೆ ಪ್ರೋತ್ಸಾಹ, ಕಾಯಕ ನಿಷ್ಠೆಗೆ ನಾಂದಿ ಹಾಡಿ, ವಚನ ಗೋಷ್ಠಿ ಶರಣರ ಜೀವನವನ್ನು ನಾಟಕಗಳ ಮೂಲಕ ವಚನಸುಧೆಯನ್ನು ನಾಡಿನಾದ್ಯಂತ ಪಸರಿಸಿ, ಸರಳ ವಿವಾಹ ಅಂತರ್ಜಾತಿಯ ವಿವಾಹದ ಮೂಲಕ ಸಾಮಾಜಿಕ ಪ್ರಜ್ಞೆ ಬೆಳೆಸಿ, ಮನುಕುಲದ ನಿತ್ಯ ಸಂಜೀವಿನಿ ಆದರು, ಪ್ರಾತಃಸ್ಮರಣೀಯರಾದರು. ಭಕ್ತರ ಒಡನಾಟ ಮಹಾಸುದಿನವೆಂದು ಭಾವಿಸಿ, ಸಮಾಜಕ್ಕಾಗಿ ಹುಟ್ಟಿ, ಸಮಾಜಕ್ಕಾಗಿ ದುಡಿದು ಸಮಾಜಕ್ಕಾಗಿಯೇ ತಮ್ಮನ್ನು ತಾವು ಸಮರ್ಪಿಸಿಕೊಂಡ ಈ ದಿವ್ಯ ಜ್ಯೋತಿ ಸೆಪ್ಟೆಂಬರ್ 24, 1992 ರಂದು ಭೌತಿಕವಾಗಿ ಆರಿದರು. ಈಗಲೂ ಕೋಟ್ಯಾಂತರ ಭಕ್ತರ ಮನಸ್ಸಿನಲ್ಲಿ ಆರದ ಬೆಳಕಾದರು. ಅಮರ ಜ್ಯೋತಿಯಾದರು. ನಂದಾದೀಪವಾದರು. ದಿಟ್ಟ ಹೆಜ್ಜೆಯ ಧೀರ, ಅದ್ಭುತ ಶಕ್ತಿಗಳ ಸಂಕೇತ, ಈ ಮಹಾ ಗುರುವಿಗೆ ಕೋಟಿ ಕೋಟಿ ಪ್ರಣಾಮಗಳು.

**- ಡಾ. ಅನಿತಾ ಹೆಚ್. ದೊಡ್ಡಗೌಡರ್,** ದಾವಣಗೆರೆ.

# ಅಭಿವೃದ್ಧಿ ಪಥದಲ್ಲಿ ಯಶಸ್ವಿನಿ ಸೊಸೈಟಿ



ದಾವಣಗೆರೆ, ಸೆ. 24 - ನಗರದ ಯಶಸ್ವಿನಿ ಕ್ರೆಡಿಟ್ ಕೋ-ಆಪ್. ಸೊಸೈಟಿ ಪ್ರಸಕ್ತ ಸಾಲಿನಲ್ಲಿ 11,95,524.51 ರೂ. ಲಾಭ ಗಳಿಸಿದೆ ಎಂದು ಸೊಸೈಟಿ ಅಧ್ಯಕ್ಷೆ ಶ್ರೀಮತಿ ಆರತಿ ಕೆ.ಎಸ್. ಸಂತಸ ವ್ಯಕ್ತಪಡಿಸಿದರು.

ಶ್ರೀ ಕೃಷ್ಣ ಕಲಾಮಂದಿರದಲ್ಲಿ ನಡೆದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2023-24ನೇ ಸಾಲಿನಲ್ಲಿ 1213 ಸದಸ್ಯರಿದ್ದು, ಸೊಸೈಟಿಯು ರೂ. 52.35 ಲಕ್ಷ ಷೇರು ಬಂಡವಾಳ ಹೊಂದಿದೆ. ರೂ. 8.55 ಕೋಟಿ ಠೇವಣಿ ಇದ್ದು, ರೂ.7.82 ಕೋಟಿ ಸಾಲ ನೀಡಲಾಗಿದೆ.

ಈ ಬಾರಿ ಷೇರುದಾರರಿಗೆ ಶೇ.10 ಡಿವಿಡೆಂಡ್ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸೊಸೈಟಿಯ ಸಂಸ್ಥಾಪಕರಾದ ರಮೇಶ್.ಬಿ (ಪಿ.ಜೆ.) ಉಪಾಧ್ಯಕ್ಷರಾದ ತಿಪ್ಪಣ್ಣ ಬಿ., ನಿರ್ದೇಶಕರು ಗಳಾದ ಶ್ರೀಮತಿ ನಾಗರತ್ನಮ್ಮ ಶ್ರೀಮತಿ ಎಸ್.ಹೆಚ್. ರೇಣುಕಮ್ಮ, ಹನಮಂತಪ್ಪ ಬಿ., ಕಂಬಣ್ಣ ಹೆಚ್. ರಮೇಶ್ ವೈ. ರೇವಣಸಿದ್ದಪ್ಪ ಸಿ., ಉಮೇಶ್ ಹೆಚ್.ಎಂ., ಎಂ. ಮಂಜುನಾಥ ವಿಶೇಷ ಆಹ್ವಾನಿತರಾದ ಶಿವಣ್ಣ ಮಾಸ್ತರ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ನಾಗರಾಜ್ ಜಿ. ಸಿಬ್ಬಂದಿ ವರ್ಗದವರು ಹಾಗೂ ಷೇರುದಾರರು ಉಪಸ್ಥಿತರಿದ್ದರು.

# ಮುಡಾ : ಮುಖ್ಯಮಂತ್ರಿಗೆ ಮುಖಭಂಗ

**(1ನೇ ಪುಟದಿಂದ)** ರಾಜ್ಯಪಾಲರು ತಮ್ಮ ವಿವೇಚನಾಧಿಕಾರವನ್ನು ವಿಶೇಷ ಸಂದರ್ಭದಲ್ಲಷ್ಟೇ ಬಳಸಬೇಕು. ಹಾಗೆ ಬಳಸಿದ ಸಂದರ್ಭಗಳಲ್ಲಿ ಕಾರಣಗಳನ್ನು ನೀಡಬೇಕು. ಆದರೆ, ಯಾವುದೇ ಪ್ರಕ್ರಿಯೆ ಪಾಲಿಸದೆ, ತರಾತುರಿಯಲ್ಲಿ ಆದೇಶ ನೀಡಿದ್ದಾರೆ ಎಂದು ಹೇಳಿದ್ದರು.

ಖಾಸಗಿ ದೂರಿನ ಮೇಲೆ 17ಎ ಅಡಿ ತನಿಖೆಗೆ ಆದೇಶ ನೀಡಲು ಸಾಧ್ಯವಿಲ್ಲ ಮತ್ತು ರಾಜ್ಯ ಸಚಿವ ಸಂಪುಟ ತೆಗೆದುಕೊಂಡ ತೀರ್ಮಾನವನ್ನು ಕಡೆಗಣಿಸಲಾಗಿದೆ ಎಂದು ವಾದ ಮಾಡಿದ್ದರು.

ಇದಕ್ಕೆ ಪುಷ್ಟಿ ನೀಡುವಂತೆ ರಾಜ್ಯದ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಮಾಜಿ ಅಡ್ವೊಕೇಟ್ ಜನರಲ್ ರವಿವರ್ಮ ಕುಮಾರ್ ವಾದ ಮಂಡಿಸಿದ್ದರು.

ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ದೂರುದಾರರ ಪರ ಮಣೀಂದರ್ ಸಿಂಗ್, ರಾಘವನ್, ಲಕ್ಷ್ಮಿ ಐಯ್ಯಂಗಾರ್ ಮತ್ತಿತರರು ವಾದ ಮಂಡಿಸಿದ್ದರು.

# ಪಕ್ಷ ಮಾಸ ಒಂದು ಚಿಂತನೆ



ನಮ್ಮ ವಂಶದಲ್ಲಿ ಬಂದಂತಹ ತಾತ, ಮುತ್ತಾತ, ಅವರ ತಂದೆ ಮುಂತಾದವರು ನಮ್ಮ ಹಿರಿಯರು. ಇವರನ್ನು ನೆನೆದು, ಇವರಿಗೆ ಒಳ್ಳೆಯದಾಗಲಿ ಎಂದು ಪೂಜೆ ಸಲ್ಲಿಸುವ 15 ದಿನಗಳ ಪರ್ವ ಕಾಲವೇ ಪಿತೃ ಪಕ್ಷ. ಇದರ ಕಡೆಯ ದಿನ ಮಹಾಲಯ ಅಮಾವಾಸ್ಯೆ. ಅಂದು ಜಾತಿ, ಮತ ಬೇಧವಿಲ್ಲದೆ ಎಲ್ಲರೂ ತಮ್ಮ ಹಿರಿಯರಿಗೆ ಪೂಜೆ ಸಲ್ಲಿಸುತ್ತಾರೆ.

ಮೃತ್ಯು ಎಂಬುದು ನಮ್ಮ ನೆರಳಿನಂತೆ ಜೊತೆಗೆ ಬರುತ್ತಿರುತ್ತದೆ. ಯಾವಾಗ ಎಂಬುದು ಯಾರಿಗೂ ತಿಳಿಯದು. ಆದರೆ 'ಜಾತಸ್ಯ ಮರಣಂ ಧೃವಂ' ಎಂಬ ಭಗವದ್ಗೀತೆಯ ವಾಕ್ಯದಂತೆ, ಹುಟ್ಟು ಎಷ್ಟು ಸತ್ಯವೋ ಸಾವು ಅಷ್ಟೇ ಸತ್ಯ. ಸತ್ತ ನಂತರ ಮತ್ತೆ ಬೇರೆ ದೇಹದೊಳಗೆ ಈ ಜೀವದ ಪ್ರವೇಶ.

ಪಿತೃಗಳು ಎಂಬ ಗಣಗಳು ಭೂಮಿ ಮತ್ತು ಸ್ವರ್ಗದ ಮಧ್ಯೆ ಇರುವ ಪಿತೃ ಲೋಕದಲ್ಲಿ ಇರುತ್ತಾರೆ. ಇದು ಚಂದ್ರ ಲೋಕದ ಹತ್ತಿರ ಇದೆ.ಪೂಜೆ ಯಲ್ಲಿ 8 ವಸುಗಳು, 11 ರುದ್ರರು, 12ಆದಿತ್ಯ ರನ್ನು ಪೂಜಿಸಲಾಗುತ್ತದೆ. ಈ ಪೂಜೆ ಮಾಡಿದರೆ, ನಮ್ಮ ಹಿರಿಯರ ಆತ್ಮಗಳು ಯಾವ ದೇಹದಲ್ಲಿ ಇರುತ್ತವೋ ಆ ದೇಹದಲ್ಲಿ ಅವರಿಗೆ ಒಳ್ಳೆಯ ಆಹಾರ ಸಿಗುತ್ತದೆ ಎಂಬ ನಂಬಿಕೆ ಇದೆ.

ಈ ಪೂಜೆಯನ್ನು ಶ್ರದ್ಧೆ ಭಕ್ತಿಯಿಂದ ಮಾಡಬೇಕು. ಬಹಳ ಶ್ರದ್ಧೆ ಬೇಕಾಗಿರುವುದರಿಂದ ಇದಕ್ಕೆ ಶ್ರಾದ್ಧ ಎಂದು ಹೆಸರು. ಪಿತೃಗಳು ಸಂತೃಪ್ತಿ ಪಡೆದರೆ, ವಂಶಕ್ಕೆ ಒಳ್ಳೆಯ ಸಂತಾನ. ಮನೆಯ ಎಲ್ಲಾ ಕಷ್ಟಗಳು ಪರಿಹಾರವಾಗುತ್ತವೆ. ಅವರಿಗೆ ಅರ್ಪಿಸಬೇಕಾಗಿರುವುದು ಅನ್ನ (ಪಿಂಡ ಪ್ರದಾನ) ನೀರು (ಜಲತರ್ಪಣ), ಎಳ್ಳು(ತಿಲ ತರ್ಪಣ) ಅಷ್ಟೇ.

ಒಂದು ಕಥೆಯ ಪ್ರಕಾರ ಕರ್ಣನಿಗೆ ದೇಹಾಂತವಾದ ಮೇಲೆ ನರಕಕ್ಕೆ ಹೋಗುತ್ತಾನೆ ಅಲ್ಲಿ ಅವನಿಗೆ ಊಟ ಮಾಡಲು ಕೇವಲ ಬಂಗಾರ ದುಡ್ಡು ಕೊಡಲಾಗುತ್ತದೆ. ಅವನು ಕಾರಣ ಕೇಳಿದಾಗ ನೀನು ಕೇವಲ ಇದನ್ನೇ ದಾನ ಮಾಡಿದ್ದೀಯಾ, ನಿನ್ನ ಪಿತೃಗಳಿಗೆ ತರ್ಪಣ ಕೊಟ್ಟಿಲ್ಲ. ಆದ್ದರಿಂದ ನೀನು ಭೂಮಿಗೆ ಹೋಗಿ ಪಿತೃಗಳಿಗೆ ಅನ್ನ ನೀರು ಕೊಟ್ಟು ಬಾ ಎಂದು ಹದಿನೈದು ದಿನ ಕಳಿಸುತ್ತಾರೆ. ಅದಾದ ನಂತರ ಅವನು ಸ್ವರ್ಗಕ್ಕೆ ಹೋಗುತ್ತಾನೆ. ಈ 15 ದಿನವೇ ಪಿತೃಪಕ್ಷ ಎಂದು ಹೇಳುತ್ತಾರೆ.

ವರುಷಕೊಮ್ಮೆ ಪಿತೃ ಪಕ್ಷದಲ್ಲಿ ಪಿತೃಗಳು ತಮ್ಮ ವಂಶದವರನ್ನು ಹರಸಲು ಭೂಮಿಗೆ ಬರುತ್ತಾರೆ ಎಂಬ ನಂಬಿಕೆಯು ಇದೆ. ಪಿತೃಗಳ ಒಂದು ಹಗಲು 15 ದಿನ ಇರುತ್ತದೆ. ಆದ್ದರಿಂದ ಅವರು 15 ದಿನ ಇರುತ್ತಾರೆ ಎಂಬ ನಂಬಿಕೆಯೂ ಇದೆ.

ಭಾದ್ರಪದ ಮಾಸದ ಕೃಷ್ಣ ಪಕ್ಷದ 15 ದಿನ ಪಕ್ಷ ಮಾಸ ಎಂದು ಕರೆಸಿಕೊಳ್ಳುತ್ತದೆ ಅಮಾವಾಸ್ಯೆಯನ್ನು ಮಹಾಲಯ ಅಮವಾಸ್ಯೆ ಎಂದು ಕರೆಯುತ್ತಾರೆ.

ಈ ಪಿತೃ ಪಕ್ಷದಲ್ಲಿ ಗಯಾ ಕ್ಷೇತ್ರದಲ್ಲಿ ಪಿತೃಪಕ್ಷ ಮೇಳ ಎಂದು ಆಚರಿಸಲಾಗುತ್ತದೆ. ಗಯಾ ಕ್ಷೇತ್ರದಲ್ಲಿರುವ ವಿಷ್ಣು ಪಾದದ ಮೇಲೆ ತಮ್ಮ ಪಿತೃಗಳ ಹೆಸರಿನಲ್ಲಿ ಪಿಂಡಪ್ರದಾನ ಮಾಡಿದರೆ, ಅವರಿಗೆ ಸದ್ಗತಿ ಎಂಬ ನಂಬಿಕೆ ಇದೆ. ಪಿತೃಗಳ ಪೂಜೆ ಮಾಡುವಾಗಲೆಲ್ಲ ವಿಷ್ಣು ಪಾದಕ್ಕೆ ಪೂಜಿಸಲಾಗುತ್ತದೆ. ಅನೇಕ ಕಡೆ ಪಿಂಡ ಪ್ರದಾನವನ್ನು ಮಾಡಿಸಲಾಗುತ್ತದೆ. ಪಿಂಡಗಳನ್ನು ಅನ್ನದಿಂದ, ಗೋಧಿ ಹಿಟ್ಟಿನಿಂದ, ಮಾಡಿ, ಅವರ ಪಿತೃಗಳ ಹೆಸರಿನಲ್ಲಿ ಅದನ್ನು ಇಡಲಾಗುತ್ತದೆ.

ಈ ಶರೀರ ನಶ್ವರ ಎಂಬುದನ್ನು ಪಿತೃಪಕ್ಷವು ನೆನಪಿಸುತ್ತದೆ. ಧರ್ಮ ಮಾರ್ಗದಲ್ಲಿ ಬಾಳಿ ಬದುಕಿ ಪಾಪ ಮಾಡದೆ ಪುಣ್ಯ ಸಂಪಾದಿಸಬೇಕಾಗಿರುವುದು ಎಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಬಾಳಿ ಬದುಕಿ ನಮ್ಮ ಇರುವಿಕೆಗೆ ಕಾರಣರಾಗಿರುವಂತಹ ಪಿತೃಗಳನ್ನು ನೆನಪಿಸಿಕೊಂಡು ಅವರಿಗೆ ಸದ್ಗತಿಯಾಗಲಿ ಎಂದು ಪ್ರಾರ್ಥನೆ ಮಾಡಿಕೊಳ್ಳಬೇಕಾದುದು ಎಲ್ಲರ ಕರ್ತವ್ಯ. ಈ ಪಕ್ಷವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಿ ಪಿತೃಗಳ ಆಶೀರ್ವಾದವನ್ನು ಪಡೆಯೋಣ.

**- ಡಾ. ರೂಪಶ್ರೀ ಶಶಿಕಾಂತ್,** ದಾವಣಗೆರೆ.

# ದಸರಾ ನಂತರ ರಾಜೀನಾಮೆ ?

**(1ನೇ ಪುಟದಿಂದ)** ವಿಳಂಬವಾಗಬಹುದು. ಇದಕ್ಕೂ ಮುನ್ನವೇ ಮುಡಾ ಹಗರಣದ ವಿಚಾರಣೆ ನಡೆಯುತ್ತಿರುವ ಜನಪ್ರತಿನಿಧಿಗಳ ನ್ಯಾಯಾಲಯದ ಮುಂದೆ ದೂರುದಾರರು ಹೈಕೋರ್ಟ್ ತೀರ್ಪಿನ ಪ್ರತಿ ಸಲ್ಲಿಸಿ, ಹಗರಣ ತನಿಖೆಗೆ ಕೋರಲಿದ್ದಾರೆ.

ಹೈಕೋರ್ಟ್ ಪೀಠವೇ, ರಾಜ್ಯಪಾಲರ ಪ್ರಾಸಿಕ್ಯೂಷನ್ ಅನುಮತಿ ನಿರ್ಧಾರ ಎತ್ತಿ ಹಿಡಿದಿರುವುದರಿಂದ ಕೆಳ ನ್ಯಾಯಾಲಯ ಕಾಯ್ದಿರಿಸಿರುವ ತೀರ್ಪನ್ನು ಪ್ರಕಟಿಸುವ ಸಾಧ್ಯತೆ ಇದೆ. ಈ ಎಲ್ಲಾ ವಿಷಯಗಳು ಸಭೆಯಲ್ಲಿ ಚರ್ಚೆಯಾಗಿವೆ.

ನನಗೆ ಪಕ್ಷದ ವರಿಷ್ಠರು, ಸಚಿವರು, ಶಾಸಕರ ಮತ್ತು ನಾಡಿನ ಜನರ ಬೆಂಬಲ ಇದ್ದರೂ ಅಧಿಕಾರ ತ್ಯಜಿಸುವ ಸ್ಥಿತಿ ನಿರ್ಮಾಣವಾಗಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ನಮ್ಮ ಹೋರಾಟ ಮುಂದುವರೆಸೋಣ. ಆದರೆ, ರಾಜ್ಯಪಾಲರು ತಮ್ಮ ವಿರುದ್ಧ ಇನ್ನೂ ಕೆಲವು ಪ್ರಕರಣಗಳ ಬಗ್ಗೆ ತನಿಖೆಗೆ ಆದೇಶ ಮಾಡುವುದನ್ನೂ ತಳ್ಳಿಹಾಕುವಂತಿಲ್ಲ. ಕಳೆದ 15 ತಿಂಗಳ ಆಡಳಿತದಲ್ಲಿ ಜನಪರ ಕೆಲಸಗಳನ್ನು ಮಾಡಿದ್ದರೂ, ಮಾಡದ ತಪ್ಪಿಗೆ ಗುರಿಯಾಗಬೇಕಾಗಿದೆ ಎಂದವರು ಹೇಳಿದ್ದಾರೆ.

ದಿನನಿತ್ಯ ಇದರ ವಿಷಯವೇ ಕೇಳಿ ನನಗೂ ಬೇಸರವಾಗಿದೆ, ದಸರಾ ನಂತರ ಸ್ಥಾನ ತ್ಯಜಿಸುವ ಬಗ್ಗೆ ನಿರ್ಧಾರ ಮಾಡುವ ಇಂಗಿತ ವ್ಯಕ್ತಪಡಿಸಿದರು.

ಗುರುವಾರ ನಡೆಯುವ ಸಂಪುಟ ಸಭೆಯಲ್ಲೂ ನ್ಯಾಯಾಲಯ ತೀರ್ಪಿನ ಕುರಿತು ಚರ್ಚಿಸುವ ಸಾಧ್ಯತೆ ಇದೆ.

# ಗಲಾಟೆಗೆ ನಿಮಿಷ, ಚೇತರಿಕೆಗೆ 15 ವರ್ಷ



**(1ನೇ ಪುಟದಿಂದ)** ಕಿವಿಮಾತು ಹೇಳಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮಾತನಾಡಿ, ಕಾನೂನು ಸುವ್ಯಸ್ಥೆಗೆ ಧಕ್ಕೆ ತರುವ ಯಾವುದೇ ವ್ಯಕ್ತಿಗಳಿದ್ದರೂ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದರು. ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಮೊನ್ನೆ ನಡೆದ ಘಟನೆಯಲ್ಲಿ 6 ಪ್ರಕರಣಗಳನ್ನು ದಾಖಲು ಮಾಡಿ 50 ಜನರನ್ನು ಬಂಧಿಸಲಾಗಿದೆ ಎಂದರು.

ಮುಖಂಡರಾದ ಡಿ.ಬಸವರಾಜ್, ಎಸ್.ಟಿ.ವೀರೇಶ್, ವೈ.ಮಲ್ಲೇಶ್, ನಜೀರ್ ಅಹಮದ್, ಸೋಮ್ಲಾಪುರ ಹನುಮಂತಪ್ಪ, ಸೈಯದ್ ಸೈಫುಲ್ಲಾ, ಅಮ್ಜದ್ ಖಾನ್, ಜಯಂತ್, ಟಿ.ಅಜ್ಗರ್ ಸೇರಿದಂತೆ ಅನೇಕ ಮುಖಂಡರು ಮಾತನಾಡಿ ಸಲಹೆಗಳನ್ನು ನೀಡಿದರು.

ವೇದಿಕೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಹೆಚ್ಚುವರಿ ರಕ್ಷಣಾಧಿಕಾರಿಗಳಾದ ವಿಜಯಕುಮಾರ್ ಎಂ. ಸಂತೋಷ್, ಮಂಜುನಾಥ್ ಉಪಸ್ಥಿತರಿದ್ದರು.

## ಡಿಜೆ ಬಿಡಿ, ಡೊಳ್ಳು ಹಿಡಿ

ಡಿ.ಜೆ. ಇಲ್ಲದಿದ್ದರೆ ಗಣಪತಿ ಹಬ್ಬವೇ ಆಗುವುದಿಲ್ಲವೇ? ಡೊಳ್ಳು – ಭಜನಾ ತಂಡಗಳನ್ನು ಏಕೆ ಬಳಸಬಾರದು? ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪ್ರಶ್ನಿಸಿದರು.

ಜೋಕುಮಾರ ಹುಟ್ಟುವುದರಲ್ಲಿ ಗಣಪ ಹೋಗಿರಬೇಕು ಎಂಬ ಸಂಪ್ರದಾಯ ಇದೆ. ಆ ಪ್ರಕಾರ, ಐದು ದಿನಗಳಲ್ಲಿ ಎಲ್ಲಾ ಗಣಪತಿಗಳ ವಿಸರ್ಜನೆ ಆಗಬೇಕಿತ್ತು. ಆದರೆ, ಇನ್ನೂ ಗಣಪತಿಗಳ ವಿಸರ್ಜನೆಯಾಗಬೇಕಿದೆ ಎಂದು ಸಚಿವರು ಹೇಳಿದರು.

ಈ ಬಗ್ಗೆ ಮಾತನಾಡಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಯ್ಯ, ಡಿ.ಜೆ. ವ್ಯವಹಾರ ಮಾಡುವ ಒಬ್ಬರನ್ನೇ ದೊಡ್ಡವರನ್ನಾಗಿ ಮಾಡುತ್ತಿದ್ದೀರಿ. ಬಡವರ ಹೊಟ್ಟೆ ತುಂಬಿಸುವ ಹಾಗೂ ಕಲಾವಿದರ ಹೊಟ್ಟೆಗೆ ಅನ್ನ ನೀಡುವ ಕೆಲಸವಾಗಬೇಕು ಎಂದರು.

## ತೀಟೆಗಳನ್ನು ಬೀದಿಗೆ ತರಬೇಡಿ



ಹಬ್ಬಗಳ ವೇಳೆ ಭಕ್ತಿ ಹಾಗೂ ಒಗ್ಗಟ್ಟು ಉಕ್ಕಬೇಕಿದೆ. ಭಾವನೆಗಳನ್ನು ಉಕ್ಕಿಸುವ ಅಗತ್ಯವಿಲ್ಲ. ಹಸಿದ ಹೊಟ್ಟೆ ತುಂಬಬೇಕೇ ಹೊರತು, ಭಾವನೆಗಳನ್ನು ತುಂಬಿಕೊಂಡು ಏನು ಮಾಡುತ್ತೀರಿ? ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಪ್ರಶ್ನಿಸಿದರು.

ಎ.ಪಿ.ಎಂ.ಸಿಯಲ್ಲಿ 250 ಎಕರೆ ವಿಶಾಲ ಜಾಗವಿದೆ. ಅಲ್ಲಿ ಉದ್ಯಮ ಬೆಳೆಯಬೇಕಿದೆ. ಗಲಾಟೆಗಳಿಂದಾಗಿ ವ್ಯವಹಾರ ರಾಣೇಬೆನ್ನೂರು ಇಲ್ಲವೇ ಚಿತ್ರದುರ್ಗಕ್ಕೆ ಹೋದರೆ ಏನು ಮಾಡಬೇಕು? ಎಂದವರು ಪ್ರಶ್ನಿಸಿದರು.

ಒಬ್ಬಿಬ್ಬರಿಂದ ಲಕ್ಷಾಂತರ ಜನಕ್ಕೆ ತೊಂದರೆಯಾಗಬಾರದು. ಅಂತಹವರಿಗೆ ತೀಟೆಗಳಿದ್ದರೆ ಮನೆಗಳಲ್ಲಿ ಇಟ್ಟುಕೊಳ್ಳಲಿ, ಅದನ್ನು ಬೀದಿಗೆ ತರುವುದು ಬೇಡ. ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲು ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

# ಸಿದ್ದರಾಮಯ್ಯ ರಾಜೀನಾಮೆಗೆ ವಿಜಯೇಂದ್ರ ಆಗ್ರಹ

ಬೆಂಗಳೂರು, ಸೆ. 24 - ಮುಡಾ ಹಗರಣದಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರ ಕ್ರಮ ಎತ್ತಿಹಿಡಿದ ರಾಜ್ಯ ಹೈಕೋರ್ಟ್ ತೀರ್ಪು ಗೌರವಿಸಿ, ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ಹಗರಣದಲ್ಲಿ ರಾಜ್ಯಪಾಲರ ಕ್ರಮವನ್ನು ರಾಜ್ಯ ಹೈಕೋರ್ಟ್ ಎತ್ತಿಹಿಡಿದಿದೆ. ಸಿದ್ದರಾಮಯ್ಯ ಅವರ ಅರ್ಜಿ ವಜಾ ಮಾಡಿ, ಕಾನೂನಿನ ಮುಂದೆ ಎಲ್ಲರೂ ಒಂದೇ ಎಂದು ತಿಳಿಸಿದೆ ಎಂದು ಹೇಳಿದರು.

ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಳೆದ ಕೆಲವು ತಿಂಗಳಿನಿಂದ ಬಿಜೆಪಿ ನಿರಂತರ ಹೋರಾಟ ನಡೆಸಿತ್ತು. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಭ್ರಷ್ಟಾಚಾರ ವಿರುದ್ಧವೂ ಹೋರಾಟ ಮಾಡಿದ್ದೆವು ಎಂದರು.

ಸ್ವತಃ ಮುಖ್ಯಮಂತ್ರಿ ಅವರ ಕುಟುಂಬವೇ ಫಲಾನುಭವಿಗಳಾಗಿದೆ. ಮೈಸೂರಿನ ಮುಡಾ ಹಗರಣ ವಿರುದ್ಧ ಬಿಜೆಪಿ-ಜೆಡಿಎಸ್ ಒಟ್ಟಾಗಿ ಬೆಂಗಳೂರು-ಮೈಸೂರು ಪಾದಯಾತ್ರೆ ನಡೆಸಿ ಯಶಸ್ವೀ ಹೋರಾಟ ಮಾಡಿತ್ತು ಎಂದು ಹೇಳಿದರು.

ನಮ್ಮ ಹೋರಾಟಕ್ಕೆ ಮೊದಲ ಜಯ ಸಿಕ್ಕಿದೆ, ಪಕ್ಷದ ಮುಂದಿನ ನಡೆ ಕುರಿತು ಪ್ರಮುಖರು ಹಾಗೂ ಹಿರಿಯರ ಜೊತೆ ಚರ್ಚಿಸಿ ನಿರ್ಧರಿಸಲಾಗುವುದು ಎಂದರು.


**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್‌ದಲ್ಲಿ 30x40 ಡುಪ್ಲೆಕ್ಸ್ ಆಂಜನೇಯ ಬಡಾವಣೆ ಉತ್ತರ 30x40 ಮೇಲೆ-ಕೆಳಗೆ ಶಿವ-ಪಾರ್ವತಿ ಬಡಾವಣೆ ಉತ್ತರ (30x40) ಮೇಲೆ+ಕೆಳಗೆ ತರಳಬಾಳು ಬಡಾವಣೆ 30x35 ಮೇಲೆ-ಕೆಳಗೆ
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 40x60, ಪಶ್ಚಿಮ 30x42, 30x55, 30x40 ಅಕ್ಕ-ಪಕ್ಕ, ಬನಶಂಕರಿ ಬಡಾವಣೆ ಪೂರ್ವ 30x57 ಅಕ್ಕ-ಪಕ್ಕ 40x60 ಅಕ್ಕ-ಪಕ್ಕ, ಪಶ್ಚಿಮ 40x70 ಅಕ್ಕ-ಪಕ್ಕ, ಪೂರ್ವ 30x50 ಅಕ್ಕ-ಪಕ್ಕ.
ಐಗೂರು ವಿಜಯಕುಮಾರ
99457 02495

**ಸೈಟ್, ಮನೆ ಸೇಲ್ ನೇರ ಓನರ್‌ನಿಂದ**
($^1/_2$%) ಅರ್ಧ ಪರ್ಸೆಂಟ್ ಕಮಿಷನ್ 30x40 ಮನೆ, ಸಿದ್ದವೀರಪ್ಪ 30x40 ಮನೆ ಕೆಳಗೆ-ಮೇಲೆ ಆಂಜನೇಯ 30x40 ಹೈಟೆಕ್ 3 upstair ಸೈಟ್ 40x60 30x40 ವಾಜಪೇಯಿ ಸೈಟ್, ಮನೆ KHB, DCM ಟೌನ್‌ಶಿಪ್
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
ಸೈಟ್, ಮನೆ ಖರೀದಿಗೆ ಬೇಕು

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟು ಮಾರಾಟಕ್ಕಿದೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ
40x45 ಪೂರ್ವ ಉತ್ತರ ಕಾರ್ನರ್ ಸೈಟು. ದರ 2,350/- ಬ್ಯಾಂಕ್ ಲೋನ್ ಆಗುತ್ತದೆ.
97402 58276

**WANTED SALESMEN FOR REPUTED COMPANY**
Experience in TV, Moblile, WATCHES, ACCESSORIES SALES
Preferred Davangere Candidates
Attractive Salary + Incentives
JAIN ENTERPRISES
6/2, Chowkipet cross, Chigateri Galli, Near Karnataka Bank ATM, Davangere-577 001.
98445 55551

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಪಶ್ಚಿಮ 50x32 ಎಸ್.ಎಸ್. 'A' ಬ್ಲಾಕ್ ದಕ್ಷಿಣ 30x40 ವಿನಾಯಕ ಬಡಾವಣೆ ಉತ್ತರ 40x60 ಎಂ.ಸಿ.ಸಿ. 'ಎ' ಬ್ಲಾಕ್ ಪೂರ್ವ-ದಕ್ಷಿಣ ಕಾರ್ನರ್ 44x60 ವಾಜಪೇಯಿ ಪಶ್ಚಿಮ 40x60
ಐಗೂರು ವಿಜಯಕುಮಾರ
99457 02495

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆಗಳು ಬಾಡಿಗೆಗೆ / ಲೀಸ್‌ಗೆ ಇವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ ಇಂಡಿಪೆಂಡೆಂಟ್ ಹೌಸ್ ಡುಪ್ಲೆಕ್ಸ್ ಹೌಸ್ 3 ಬೆಡ್ ರೂಮ್ ಮನೆ ಲೀಸ್‌ಗೆ ಇದೆ. ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್ ಬಾಡಿಗೆಗೆ ಇವೆ. ವಿದ್ಯಾನಗರ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
SK ಹೋಂ ನರ್ಸಿಂಗ್ ಸರ್ವೀಸ್
ವಯೋವೃದ್ಧರನ್ನು ಮತ್ತು ಅನಾರೋಗ್ಯ ವಯೋವೃದ್ಧರನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ವಿದ್ಯಾಭ್ಯಾಸ : 7 ರಿಂದ 12ನೇ ತರಗತಿ ಮುಗಿಸಿರಬೇಕು.
ಸ್ಥಳ : ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಭಾಷೆ : ಕನ್ನಡ, ಇಂಗ್ಲಿಷ್, ಹಿಂದಿ. ಆಫೀಸ್ : ಮೌನೇಶ್ವರ ಬಡಾವಣೆ, ನಿಟ್ಟುವಳ್ಳಿ 60 Feet Road. ಸಂಪರ್ಕಿಸಿ :
99027 15692
85500 48673, 85500 48672

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆ ಲೀಸ್‌ಗೆ ಇದೆ**
'ಎ' ಬ್ಲಾಕ್ ಮೂರನೇ ಕ್ರಾಸ್, ಕೋರ್ಟ್ ಹಿಂಭಾಗ, ದೇವರಾಜ್ ಅರಸ್ ಬಡಾವಣೆ, 2 ಬೆಡ್ ರೂಮ್, 1ನೇ ಫ್ಲೋರ್, ಸಸ್ಯಹಾರಿಗಳಿಗೆ ಮಾತ್ರ.
74111 56285, 81055 57433

**ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ**
ನಿಸರ್ಗ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ಎಸ್‌ಓಜಿ ಬಡಾವಣೆ, ದಾವಣಗೆರೆ.
1) NTC/RBST/ PUC :- 01
2) BCom/BSc :- 01
3) BSc BEd:-01
4) BPEd/CPEd:-01. ಸಂಪರ್ಕಿಸಿ:
87927 02690, 99862 26454

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ಸಂಪರ್ಕಿಸಿ :
ಶಾಮನೂರು ಶಾಪೆ
ಮೊ. 98803-10567

**ಮನೆ ಬಾಡಿಗೆಗೆ ಇದೆ**
ಎಸ್.ಎಸ್.ಎಂ.ಎನ್. ಕ್ಲೇವ್ ಬಡಾವಣೆ, 4ನೇ ಅಡ್ಡ ರಸ್ತೆ, ಗ್ಲಾಸ್ ಹೌಸ್ ಹತ್ತಿರ, ದಾವಣಗೆರೆ, 2 ರೂಂ ಮನೆ ಬಾಡಿಗೆ ಇದೆ.
94805 00004
82175 48295
94499 73636
Veg Only

**ಕೆಲಸ ಖಾಲಿ ಇದೆ**
ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮತ್ತು ಡೆಲಿವರಿ ಬಾಯ್ ಕೆಲಸ ಖಾಲಿ ಇದೆ.
ಮಿನಿಮಂ ಎಕ್ಸ್‌ಪಿರಿಯೆನ್ಸ್ : 1 ವರ್ಷ. ಕರೆ ಮಾಡಿ :
74066 59695, 79751 77934

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water.
Vidyanagar last city bus stop, Davangere
8951938228, 8050222181

**CHANGE OF NAME**
I **Shukla ramakant Vernekar** (Old Name) R/0 #2587, 4th Main, M.C.C A Blcok, Davanagere - 577004. karnataka State. I have changed my name as **Shukla Ramakanth Vernekar D/o Ramakanth Sadananda Vernekar** (New Name) vide affidavit on 23.9.2024 sworn before Notary I.P Brahmakumar, Davanagere. In future all my transactions will be in my new name.
**Shukla Ramakanth Vernekar**

**ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)**
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**SSLC/PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಕಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಕೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

**WANTED**
Banking Sector
Tele Caller
(Female Only)
Qualification : Any Degree.
85500 23110
Interview Time - 11AM

# ಯುಬಿಡಿಟಿ ಕಾಲೇಜಿನಲ್ಲಿ ಪೇಮೆಂಟ್ ಕೋಟಾ ಸರ್ಕಾರ ಮಾಡಿರುವ ಜನದ್ರೋಹ



**'ಯುಬಿಡಿಟಿ ಉಳಿಸಿ' ಸಮಾವೇಶದಲ್ಲಿ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಆಕ್ರೋಶ**

ದಾವಣಗೆರೆ, ಸೆ. 24- ಈಗಾಗಲೇ ಸಮರ್ಪಕ ಸೌಲಭ್ಯಗಳಿಲ್ಲದೆ, ಶಿಕ್ಷಕರ ಹುದ್ದೆಗಳು ನೇಮಕಾತಿಯಾಗದೇ ಶಿಕ್ಷಣ ವ್ಯವಸ್ಥೆಯು ಶೋಚನೀಯ ಸ್ಥಿತಿಯಲ್ಲಿದೆ. ಹೀಗಿರುವಾಗ ಹೆಚ್ಚಿನ ಆರ್ಥಿಕ ಜವಾಬ್ದಾರಿ ವಹಿಸಿ ಸರ್ಕಾರವು ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿಪಡಿಸುವುದನ್ನು ಬಿಟ್ಟು ಯುಬಿಡಿಟಿ ಕಾಲೇಜಿನಲ್ಲಿ ಸೀಟು ಮಾರಾಟ ಮಾಡುತ್ತಿರುವುದು ಜನದ್ರೋಹದ ಕೆಲಸವಾಗಿದೆ ಎಂದು ಬಂಡಾಯ ಸಾಹಿತಿಗಳೂ, ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ರಾಜ್ಯಾಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಿ ಕಾಲೇಜಿನಲ್ಲಿ ಪೇಮೆಂಟ್ ಕೋಟಾ ವಿರೋಧಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ಚಳವಳಿಯ ಭಾಗವಾಗಿ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

ಹಿಂದಿನ ರಾಜ್ಯ ಸರ್ಕಾರ ಜಾರಿಗೊಳಿಸಿದ ಶಿಕ್ಷಣ ವಿರೋಧಿ ಕರಾಳ ರಾಷ್ಟ್ರೀಯ ಶಿಕ್ಷಣ ನೀತಿ- 2020ರ ವಿರುದ್ಧ ಹಾಗೂ ಅದರ ಭಾಗವಾದ ನಾಲ್ಕು ವರ್ಷದ ಪದವಿ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ಹಾಗೂ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯಿಂದ ನಡೆದ ಹೋರಾಟದ ಫಲವಾಗಿ ಇಂದು ಪ್ರಸಕ್ತ ರಾಜ್ಯ ಸರ್ಕಾರವು ಆ ನೀತಿಯನ್ನು ಹಿಂಪಡೆದು ರಾಜ್ಯ ಶಿಕ್ಷಣ ನೀತಿಯ ರಚನೆಗೆ ಮುಂದಾಗಿದೆ. ಈ ರೀತಿ ವಿದ್ಯಾರ್ಥಿಗಳು ಬಲಿಷ್ಠ ಚಳವಳಿ ಮೂಲಕ ಯುಬಿಡಿಟಿ ಕಾಲೇಜು ಉಳಿಸಬೇಕೆಂದು ಕರೆ ನೀಡಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎ. ಮುರುಗಪ್ಪ ಮಾತನಾಡಿ, ಪೇಮೆಂಟ್ ಕೋಟಾ ಎಂಬ ಕೆಟ್ಟ ಸಂಪ್ರದಾಯವನ್ನು ಯುಬಿಡಿಟಿ ಕಾಲೇಜಿನಲ್ಲಿ ಸರ್ಕಾರವು ಆರಂಭಿಸಿದೆ.

ಒಂದೇ ತರಗತಿಯಲ್ಲಿ ಓದುವ ವಿದ್ಯಾರ್ಥಿಗಳನ್ನು ಒಡೆದು ಆಳುವ ನೀತಿ ಇದಾಗಿದೆ ಎಂದರು.

ರಾಜ್ಯದ ಬಡ ಜನರಿಗೆ 5 ಗ್ಯಾರಂಟಿಗಳನ್ನು ನೀಡುತ್ತಿರುವ ರಾಜ್ಯ ಸರ್ಕಾರವು, ಶಿಕ್ಷಣವನ್ನು 6ನೇ ಗ್ಯಾರಂಟಿಯಾಗಿ ನೀಡಬೇಕು ಎಂದು ಆಗ್ರಹ ವ್ಯಕ್ತಪಡಿಸಿದರು.

ಡಿ.ಆರ್.ಎಂ. ವಿಜ್ಞಾನ ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ. ಕೆ.ಎಸ್. ಈಶ್ವರಪ್ಪ ಮಾತನಾಡಿ, ಇತ್ತೀಚೆಗೆ ಪ್ರಜಾಪ್ರಭುತ್ವ ದಿನವನ್ನು ಅದ್ದೂರಿಯಿಂದ ಆಚರಿಸಿದ ರಾಜ್ಯ ಕಾಂಗ್ರೆಸ್ ಸರ್ಕಾರವು ಕಡು ಪ್ರಜಾಪ್ರಭುತ್ವ ವಿರೋಧಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಡ ರೈತ ಕಾರ್ಮಿಕರ ಮಕ್ಕಳನ್ನು ಉನ್ನತ ಶಿಕ್ಷಣದಿಂದ ಹೊರಗಿಡುವ ಈ ನೀತಿಯು ಬುದ್ಧ, ಬಸವ, ಅಂಬೇಡ್ಕರ್ ರಂತಹ ಮಹಾನ್ ವ್ಯಕ್ತಿಗಳ ಆಶಯಗಳಿಗೆ ವಿರುದ್ಧವಾಗಿದೆ. ಬಡವರ ಪರ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿಗಳು ವಿದ್ಯಾರ್ಥಿಗಳ ಈ ಹೋರಾಟದ ಕೂಗಿಗೆ ಸ್ಪಂದಿಸಬೇಕು. ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರು ವಿದ್ಯಾರ್ಥಿಗಳ ಕೂಗನ್ನು ಸರ್ಕಾರಕ್ಕೆ ಮುಟ್ಟಿಸಬೇಕು. ವಿದ್ಯಾರ್ಥಿಗಳು ಆರ್ ಜಿ ಕರ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳು ಸುಪ್ರೀಂ ಕೋರ್ಟಿನ ಕಡಿವಾಣವನ್ನೂ ಲೆಕ್ಕಿಸದೆ ಹೋರಾಡಿ ಜಯ ಗಳಿಸಿದ ರೀತಿಯಲ್ಲಿ 'ಯುಬಿಡಿಟಿ ಉಳಿಸಿ' ಚಳವಳಿಯು ಯಾವ ಅಡೆತಡೆಯನ್ನೂ ಲೆಕ್ಕಿಸದೆ ಬೆಳೆಯಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಯುಬಿಡಿಟಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸುರೇಶ್ ಚಂದ್ರ ಮೋಹನ್ ಮಾತನಾಡಿ, ಈಗಿರುವ 43 ಸಾವಿರ ಶುಲ್ಕವೇ ಬಡ ವಿದ್ಯಾರ್ಥಿಗಳಿಗೆ ಹೊರೆಯಾಗಿದೆ. ಎಲ್ಲ ವಿದ್ಯಾರ್ಥಿಗಳಿಗೂ ಈ ಶುಲ್ಕವನ್ನು ಭರಿಸಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರವೇ ಯುಬಿಡಿಟಿ ಕಾಲೇಜಿನ ಸಂಪೂರ್ಣ ಆರ್ಥಿಕ ಜವಾಬ್ದಾರಿ ವಹಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಎಐಡಿಎಸ್‌ಓನ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಮಾತನಾಡಿ, ಶುಲ್ಕ ಹೆಚ್ಚಳ ಸೇರಿದಂತೆ ಯುವಿಸಿಇ ಕಾಲೇಜಿನ ಹಲವಾರು ಸಮಸ್ಯೆಗಳ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ನಡೆಸುತ್ತಿರುವ ಹೋರಾಟ ಹಲವಾರು ವಿಜಯಗಳನ್ನು ಗಳಿಸಿದೆ. ಅದೇ ರೀತಿ ಯುಬಿಡಿಟಿ ಹೋರಾಟ ಮುಂದುವರೆಯಬೇಕು. ಈಗ ಯುಬಿಡಿಟಿ ಯಲ್ಲಿ ಸರ್ಕಾರವು ಜಾರಿಗೊಳಿಸಿರುವ ಪೇಮೆಂಟ್ ಕೋಟಾ ಶುಲ್ಕವು ಈ ಸಂಸ್ಥೆಯನ್ನು ಆರ್ಥಿಕ ಸ್ವಾಯತ್ತ ಸಂಸ್ಥೆಯನ್ನಾಗಿಸಿ ಅಂತಿಮವಾಗಿ ಖಾಸಗಿಯವರ ಪಾಲು ಮಾಡುತ್ತದೆ ಎಂದರು.

ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘಟನೆಯ ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ್, ಎಐಡಿಎಸ್‌ಓ ನಡೆಸಿದ ಮೂರು ದಶಕಗಳ ಹೋರಾಟಗಳ ಫಲವಾಗಿ ಇಲ್ಲಿಯವರೆಗೂ ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಡೊನೇಷನ್ ಕ್ಯಾಪಿಟೇಶನ್ ಹಾವಳಿಯು ತಲೆದೂರಿಲ್ಲ. ಅಷ್ಟೇ ಅಲ್ಲದೆ ಎಐಡಿಎಸ್‌ಓ ನೇತೃತ್ವದಲ್ಲಿ ನಡೆದ ವಿದ್ಯಾರ್ಥಿ ಚಳವಳಿಯಿಂದ ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ನಿಗದಿಪಡಿಸಬೇಕಾಯಿತು. ಹೀಗಿರುವಾಗ, ಸರ್ಕಾರಿ ಕಾಲೇಜಿನಲ್ಲಿ ಪೇಮೆಂಟ್ ಕೋಟಾವನ್ನು ಯಾವುದೇ ಕಾರಣಕ್ಕೂ ವಿದ್ಯಾರ್ಥಿ ಸಮೂಹ ಸಹಿಸುವುದಿಲ್ಲ ಎಂದರು.

ಸಂಘಟನೆಯ ಜಿಲ್ಲಾಧ್ಯಕ್ಷರಾದ ಪೂಜಾ ನಂದಿಹಳ್ಳಿ, ಜಿಲ್ಲಾ ಕಾರ್ಯದರ್ಶಿ ಸುಮನ್ ಟಿ.ಎಸ್., ಯುಬಿಡಿಟಿ ಕಾಲೇಜು ಹೋರಾಟ ಸಮಿತಿ ಸದಸ್ಯರಾದ ಚಂದನ, ಅಭಿಷೇಕ್, ಅಖಿಲೇಶ್, ಭರತ್, ಆದರ್ಶ್, ಶಿವನಗೌಡ, ರಕ್ಷಿತಾ, ರೀಮಾ, ಮೇಘನಾ, ರುದ್ರೇಶ್, ಸಂತೋಷ್, ಚೇತನ್, ಶ್ರವಣ್, ವಿಜಯ್, ನಾಗೇಂದ್ರ ಸೇರಿದಂತೆ ಯುಬಿಡಿಟಿ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

## ಇನ್ನರ್‌ವ್ಹೀಲ್, ರೋಟರಿ ಸಹಯೋಗದಲ್ಲಿ ಶಿಕ್ಷಕರ, ಇಂಜಿನಿಯರ್ಸ್ ದಿನಾಚರಣೆ



ದಾವಣಗೆರೆ, ಸೆ. 24- ಇನ್ನರ್‌ವ್ಹೀಲ್ ಹಾಗೂ ರೋಟರಿ ಸಹಯೋಗದಲ್ಲಿ ಡಾ. ಎಸ್. ರಾಧಾಕೃಷ್ಣನ ಜನ್ಮ ದಿನದ ಪ್ರಯುಕ್ತ ಶಿಕ್ಷಕರ ದಿನಾಚರಣೆಯನ್ನು ಹಾಗೂ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮದಿನದ ಪ್ರಯುಕ್ತ ಇಂಜಿನಿಯರ್ಸ್ ದಿನಾಚರಣೆ ಆಚರಿಸಲಾಯಿತು

ರೋಟರಿ ಹಾಗೂ ಇನ್ನರ್ ವ್ಹೀಲ್ ಅಧ್ಯಕ್ಷರುಗಳಾದ ಎಸ್. ಮಳವಳ್ಳಿ ಹಾಗೂ ಪ್ರೇಮಾ ಮಹೇಶ್ವರಪ್ಪ ಅಧ್ಯಕ್ಷತೆಯಲ್ಲಿ ಸಮಾರಂಭ ಏರ್ಪಡಿಸಲಾಗಿತ್ತು.

ದಾವಣಗೆರೆ ತಾಲ್ಲೂಕಿನ ಅತ್ಯುತ್ತಮ ಶಿಕ್ಷಕರುಗಳಾದ ಕುರ್ಕಿ ಸರ್ಕಾರಿ ಪ್ರೌಢಶಾಲೆಯ ಶ್ರೀಮತಿ ಪಾರ್ವತಮ್ಮ, ರಾಮಗೊಂಡನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಶ್ರೀಮತಿ ಸುಜಾತ, ಹೊಸಬೆಳವನೂರು ಕುವೆಂಪು ಶತಮಾನೋತ್ಸವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶ್ರೀಮತಿ ಉಮಾದೇವಿ, ತರಳಬಾಳು ನಗರ, 6ನೇ ಮೈಲಿ ಕಲ್ಲು ಹಿರಿಯ ಪ್ರಾಥಮಿಕ ಶಾಲೆಯ ಸುಧಾ ಅವರುಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು. ಮುಖ್ಯ ಅತಿಥಿಯಾಗಿದ್ದ ವಿಶ್ವಜಿತ್ ಜಾಧವ್ ಅವರು ಮಾತನಾಡಿದರು. ಅಂಜಾನಾ ಮೂರ್ತಿ ವಂದಿಸಿದರು.

## ಜಗಳೂರು : ಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡಬೇಕು



**ಪೌರ ಕಾರ್ಮಿಕರಿಗೆ ಶಾಸಕ ಬಿ. ದೇವೇಂದ್ರಪ್ಪ ಸಲಹೆ**

ಜಗಳೂರು, ಸೆ. 24 - ಪೌರ ಕಾರ್ಮಿಕರು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ಉಜ್ವಲ ಭವಿಷ್ಯ ರೂಪಿಸಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ಹೇಳಿದರು.

ಪಟ್ಟಣದ ಪಟ್ಟಣ ಪಂಚಾಯಿತಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ 13ನೇ ವರ್ಷದ ಪೌರ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪೌರ ಕಾರ್ಮಿಕರ ಸ್ವಚ್ಛತೆ ಕಾರ್ಯ ಶ್ಲಾಘನೀಯ ಸಾರ್ವಜನಿಕರು ಅವರಿಗೆ ಸಹಕರಿಸಿ ಪಟ್ಟಣದ ಸ್ವಚ್ಛತೆಗೆ ಕೈಜೋಡಿಸಬೇಕು. ದುಶ್ಚಟಗಳಿಂದ ದೂರಾಗಿ ಆರ್ಥಿಕವಾಗಿ ಸದೃಢರಾಗಿ ಪೌರ ಕಾರ್ಮಿಕರು ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಡಿ' ಎಂದು ಕಿವಿಮಾತು ಹೇಳಿದರು.

ಸಾರ್ವಜನಿಕರು ಪೌರ ಕಾರ್ಮಿಕರನ್ನು ಗೌರವದಿಂದ ಕಾಣಬೇಕು. ಅವರೊಂದಿಗೆ ಸಹಕರಿಸಿ ಪಟ್ಟಣದ ಸ್ವಚ್ಛತೆಗೆ ಕೈಜೋಡಿಸಬೇಕು ಎಂದರು.

'ಪಟ್ಟಣ ಪಂಚಾಯಿತಿ ಇಲಾಖೆ ಅಧಿಕಾರಿಗಳ ಪರಿಸರ ಸ್ವಚ್ಛತೆ ಕುರಿತು ಜಾಗೃತಿ ಕಾರ್ಯಕ್ರಮಗಳಿಗೆ ಕೈಜೋಡಿಸಬೇಕು. ಹಸಿ ಕಸ-ಒಣ ಕಸ ಬೇರ್ಪಡಿಸಿ ಕಸ ವಿಲೇವಾರಿ ಮಾಡಬೇಕು' ಎಂದು ಹೇಳಿದರು.

ಉತ್ತಮ ಸೇವೆ ಸಲ್ಲಿಸಿದ ಪೌರ ಕಾರ್ಮಿಕರನ್ನು ಶಾಸಕರು ಸನ್ಮಾನಿಸಿ ಗೌರವಿಸಿದರು. ಸಮಾರಂಭದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹಂತೇಶ್, ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ, ಪ.ಪಂ.ಅಧ್ಯಕ್ಷ ನವೀನ್ ಕುಮಾರ್, ಉಪಾಧ್ಯಕ್ಷೆ ಲೋಕಮ್ಮ, ತಾ.ಪಂ. ಇಓ ಕೆಂಚಪ್ಪ, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಜನಜಾಗೃತಿ ವೇದಿಕೆಯ ಪಿ. ಎಸ್.ಅರವಿಂದನ್, ಪಂ. ಸದಸ್ಯ ಆರ್. ತಿಪ್ಪೇಸ್ವಾಮಿ, ಲಲಿತಮ್ಮ, ನಿರ್ಮಲ ಕುಮಾರಿ, ಪಾಪಲಿಂಗಪ್ಪ, ಲುಕ್ಮಾನ ಖಾನ್, ಶಕೀಲ್ ಅಹಮ್ಮದ್, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಚಿನ್ನಪ್ಪ ಸೇರಿದಂತೆ ಸದಸ್ಯರು, ಸಿಬ್ಬಂದಿ ವರ್ಗದರು ಇದ್ದರು.

## ಕ್ಯಾಂಪಸ್ ಸಂದರ್ಶನದಲ್ಲಿ ದವನ್ - ನೂತನ ಕಾಲೇಜಿನ ವಿದ್ಯಾರ್ಥಿಗಳು ಆಯ್ಕೆ



ದಾವಣಗೆರೆ, ಸೆ. 24 - ನಗರದ ದವನ್ ಹಾಗೂ ನೂತನ ಪದವಿ ಕಾಲೇಜಿನಲ್ಲಿ ಸೆವೆಂತ್ ಸೆನ್ಸ್ ಟ್ಯಾಲೆಂಟ್ ಸೆಲ್ಯೂಷನ್ಸ್ ವತಿಯಿಂದ ಎಡಿಗ್ಲೋಬೆ ಕಂಪನಿಯು ಕ್ಯಾಂಪಸ್ ಸಂದರ್ಶನ ನಡೆಸಲಾಯಿತು.

ಕ್ಯಾಂಪಸ್ ಸಂದರ್ಶನದಲ್ಲಿ ಕಾಲೇಜಿನ ಅಂತಿಮ ವರ್ಷದ ಬಿಸಿಎ, ಬಿ.ಕಾಂ ಹಾಗೂ ಬಿಬಿಎ ವಿದ್ಯಾರ್ಥಿಗಳಾದ ಜಿ. ಸಾಯಿ ಶ್ರಾವಣಿ, ಹರನ್. ಎನ್ ಆರ್. ಸುರ್ವೆ, ಎಂ. ಎ. ಚಿನ್ಮಯ್, ಎಂ. ಹೆಚ್. ಜಾಫರ್ ಸಾಧಿಕ್, ಶಾಯಿದ್ ಆಫ್ರಿದಿ, ಯೋಗೇಶ್ ಹಾಗೂ ಡಿ. ಜೆ ಜಾನಕಿ ಆಯ್ಕೆಯಾಗಿದ್ದಾರೆ.

ಕ್ಯಾಂಪಸ್ ಸಂದರ್ಶದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಕಾರ್ಯದರ್ಶಿ ವೀರೇಶ್ ಪಟೇಲ್, ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ದವನ್ ಕಾಲೇಜಿನ ನಿರ್ದೇಶಕರು ಹಾಗೂ ನೂತನ ಪದವಿ ಕಾಲೇಜಿನ ಪ್ರಾಚಾರ್ಯ ಹರ್ಷರಾಜ್ ಎ. ಗುಜ್ಜರ್, ಉಪಪ್ರಾಚಾರ್ಯರಾದ ಶ್ರೀಮತಿ ಎನ್. ಅನಿತಾ, ಹಾಗೂ ಬಿಬಿಎ, ಬಿ.ಕಾಂ ವಿಭಾಗದ ಮುಖ್ಯಸ್ಥರಾದ ಶಂಕರ್. ಬಿ. ಸಿ, ಚಂದನ್. ಜಿ. ಬಿ ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಇಂದು 'ವಿವೇಕಧಾರಾ' ಕೃತಿ ಲೋಕಾರ್ಪಣೆ

ನಗರದ ರಿಂಗ್ ರಸ್ತೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಇದೇ 25 ರಂದು ಸಂಜೆ 5 ಗಂಟೆಗೆ ವೀರೇಶಾನಂದ ಸರಸ್ವತಿ ಅವರ 'ವಿವೇಕಧಾರಾ' ಕೃತಿ ಲೋಕಾರ್ಪಣಾ ಸಮಾರಂಭ ನಡೆಯಲಿದೆ. ರಾಮಕೃಷ್ಣ ಮಿಷನ್ ಕಾರ್ಯದರ್ಶಿ ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್ ಕೃತಿ ಬಿಡುಗಡೆ ಮಾಡಲಿದ್ದಾರೆ. ಎಸ್.ಎಸ್. ಆಸ್ಪತ್ರೆ ಉಪಪ್ರಾಂಶುಪಾಲರಾದ ಡಾ.ಶಶಿಕಲಾ ಕೃಷ್ಣಮೂರ್ತಿ ಕೃತಿ ಪರಿಚಯ ಮಾಡಿ ಕೊಡಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಎಸ್. ಜೆ ಶ್ರೀಧರ್, ಡಾ. ಬಿ.ಟಿ. ಅಚ್ಯುತ್, ಬಿ. ವಾಮದೇವಪ್ಪ, ಎನ್.ಎಂ. ಶಾಂತಿನಾಥ್ ಆಗಮಿಸಲಿದ್ದಾರೆ.

# ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಬಿಜೆಪಿ ಆಗ್ರಹ



ದಾವಣಗೆರೆ, ಸೆ.24- ಮುಡಾ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂ ವಿರುದ್ಧದ ಪ್ರಾಸಿಕ್ಯೂಷನ್‌ಗೆ ಹೈಕೋರ್ಟ್ ಆದೇಶಿಸಿದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಿ ಜಿಲ್ಲಾ ಬಿಜೆಪಿ ಮುಖಂಡರು, ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಪಕ್ಷದ ಜಿಲ್ಲಾ ಕಚೇರಿಯಿಂದ ಮೆರವಣಿಗೆ ನಡೆಸಿದ ಕಾರ್ಯಕರ್ತರು ಜಯದೇವ ವೃತ್ತದಲ್ಲಿ ಜಮಾಯಿಸಿ, ಸಿದ್ದರಾಮಯ್ಯ ವಿರುದ್ಧ ಧಿಕ್ಕಾರ ಕೂಗಿದರು.

ಈ ವೇಳೆ ಮಾತನಾಡಿದ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರು, ಲೋಕಾ ಯುಕ್ತ ತನಿಖೆ ವೇಳೆ ಆರೋಪ ಕೇಳಿಬಂದ ತಕ್ಷಣವೇ ಬಿ. ಎಸ್.ಯಡಿಯೂರಪ್ಪ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹಾಗೆಯೇ ಪ್ರಾಸಿಕ್ಯೂಷನ್ ಎದುರಿಸಬೇಕಿರುವ ಸಿದ್ದರಾಮಯ್ಯ ಸಿಎಂ ಸ್ಥಾನದಿಂದ ಕೆಳಗಿಳಿಯಬೇಕು. ಇಲ್ಲವಾದಲ್ಲಿ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಉಗ್ರ ಹೋರಾಟ ಮಾಡಲಿದ್ದೇವೆ ಎಂದು ಎಚ್ಚರಿಕೆ ನೀಡಿದರು.

ಸಿದ್ದರಾಮಯ್ಯ ಕುಟುಂಬಸ್ಥರು ಹೊಂದಿದ್ದ ಮುಡಾ ನಿವೇಶನಗಳ ಕುರಿತಂತೆ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದು ಬಿಜೆಪಿ ಅಲ್ಲ. ಈ ವಿಚಾರದಲ್ಲಿ ಬಿಜೆಪಿ ಹಾಗೂ ರಾಜ್ಯಪಾಲರನ್ನು ಟೀಕಿಸುವುದು ಸರಿಯಲ್ಲ. ಇಡಿ, ಸಿಬಿಐ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡಿದ್ದು ಕಾಂಗ್ರೆಸ್. ಹೀಗಾಗಿ ನಮ್ಮ ವಿರುದ್ಧ ಟೀಕಿಸುವ ನೈತಿಕತೆ ಅವರಿಗಿಲ್ಲ ಎಂದು ಹೇಳಿದರು.

ರೈತ-ದಲಿತ ವಿರೋಧಿ ಹಾಗೂ ಹಿಂದೂ ವಿರೋಧಿಯೂ ಆಗಿರುವ ಕಾಂಗ್ರೆಸ್ ಸರ್ಕಾರ ಮತ ಬ್ಯಾಂಕ್‌ಗಾಗಿ ಹಿಂದುಗಳನ್ನು ಟಾರ್ಗೆಟ್ ಮಾಡುತ್ತಿದೆ. ಗಲಭೆ ಹಿನ್ನೆಲೆಯಲ್ಲಿ ಅಮಾಯಕ ಹಿಂದುಗಳನ್ನು ಬಂಧಿಸಿ, ಪೊಲೀಸರ ಮೂಲಕ ಹಿಂಸೆ ನೀಡಲಾಗುತ್ತಿದೆ. ಸರ್ಕಾರ ಕೂಡಲೇ ಅಮಾಯಕ ಹಿಂದೂಗಳನ್ನು ಬಂಧಿಸುವುದನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಮುಖಂಡ ಮಾಡಾಳು ಮಲ್ಲಿಕಾರ್ಜುನ್ ಮಾತನಾಡಿ, ಹೈಕೋರ್ಟ್ ಪ್ರಾಸಿಕ್ಯೂಷನ್‌ಗೆ ಒಪ್ಪಿದ ಬಳಿಕವೂ ಸಿಎಂ ಸಿದ್ದರಾಮಯ್ಯ ಅವರು ಭಂಡತನ ಪ್ರದರ್ಶಿಸುವುದು ಸರಿಯಲ್ಲ. ಒಂದು ವರ್ಗದ ತುಷ್ಟೀಕರಣ ಹಾಗೂ ಓಲೈಕೆ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರವನ್ನು ವಿಸರ್ಜನೆ ಮಾಡಬೇಕು. ಆರೋಪ ಮುಕ್ತರಾದ ಬಳಿಕ ಮತ್ತೆ ಸ್ಥಾನದಲ್ಲಿ ಮುಂದುವರೆಯಲಿ. ಹಪ್ಪಳ ತಿಂದವರು ಕದ ತಿನ್ನುವವರಿಗೆ ಅವಕಾಶ ನೀಡಬಾರದು ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ ಮಾತನಾಡಿ, ಅಹಿಂದ ಹೆಸರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಅಭಿವೃದ್ಧಿ ಕಾರ್ಯ ಮರೆತು ಹಗರಣಗಳಲ್ಲೇ ಕಾಲಹ ರಣ ಮಾಡಿದೆ. ಸಿಎಂ ತಪ್ಪೆಸಗಿಲ ಎನ್ನುವು ದಾದದಲ್ಲಿ ಮುಡಾ ನಿವೇಶನ ಕುರಿತು ಕಲಾ ಪದ ಚರ್ಚೆಯಿಂದ ಪಲಾಯನ ಮಾಡಿ ದ್ದೇಕೆ? ಎಂದು ಪ್ರಶ್ನಿಸಿದರು. ನ್ಯಾಯಾಲಯಕ್ಕೆ ಸಿದ್ದರಾಮಯ್ಯ ಅವರು ಗೌರವ ನೀಡುವು ದಾದಲ್ಲಿ ಸಿಎಂ ಸ್ಥಾನದಲ್ಲಿ ಮುಂದುವರಿ ಯುವುದು ಸರಿಯಲ್ಲ ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ಬಿ.ಜಿ. ಅಜಯಕುಮಾರ್, ಲೋಕಿಕೆರೆ ನಾಗರಾಜ್, ಎಸ್.ಟಿ.ವೀರೇಶ್, ಕೆ. ಪ್ರಸನ್ನಕುಮಾರ್, ಆರ್.ಶಿವಾನಂದ್, ಪಿ.ಸಿ.ಶ್ರೀನಿವಾಸ್, ಕೆ.ಎಂ. ವೀರೇಶ್, ಸತೀಶ್ ಕೊಳೇನಹಳ್ಳಿ, ಅನಿಲ್‌ನಾಯ್ಕ, ಟಿಂಕರ್ ಮಂಜಣ್ಣ, ಎಚ್.ಪಿ. ವಿಶ್ವಾಸ್, ಕಲ್ಲೇಶ್, ಭಾಗ್ಯ ಪಿಸಾಳೆ, ಗಾಯತ್ರಿ ಖಂಡೋಜಿರಾವ್, ಗೌರಮ್ಮ ಪಾಟೀಲ್ ಇತರರಿದ್ದರು.

## ವಿಶೇಷ ಶಿಕ್ಷಕರಿಗೆ ಪ್ರಶಸ್ತಿಗಾಗಿ ಅರ್ಜಿ

ದಾವಣಗೆರೆ, ಸೆ.24- ವಿಶ್ವ ವಿಕಲ ಚೇತನರ ದಿನಾಚರಣೆ ಅಂಗವಾಗಿ ಪ್ರಸಕ್ತ ಸಾಲಿನಲ್ಲಿ ವಿಕಲ ಚೇತನರ ಕ್ಷೇತ್ರದಲ್ಲಿ ಸಾಧನೆ ಗೈದ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ 15 ವರ್ಷಕ್ಕೂ ಅಧಿಕ ಕಾಲ ಸೇವೆ ಸಲ್ಲಿಸಿರುವ, ಸಲ್ಲಿಸುತ್ತಿರುವ ವಿಶೇಷ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲು ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿಯಲ್ಲಿ ಅರ್ಜಿ ಲಭ್ಯವಿದ್ದು, ಅಕ್ಟೋಬರ್ 15 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ. ಮಾಹಿತಿಗಾಗಿ 08192-263936, 263939 ಸಂಪರ್ಕಿಸಿ.

**ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ**
ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.

**89ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

ದಿನಾಂಕ 25-09-2024 ರ ಬುಧವಾರ ಬೆಳಿಗ್ಗೆ 11.30 ಗಂಟೆಗೆ ಸರಿಯಾಗಿ ಕ್ಲಬ್‌ನ ವಾರ್ಷಿಕ ಮಹಾಸಭೆಯನ್ನು ಕ್ಲಬ್‌ನ ಆವರಣದಲ್ಲಿ ಅಧ್ಯಕ್ಷರಾದ ಶ್ರೀ ಎ.ಬಿ.ಚಂದ್ರಶೇಖರ್ ಇವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಆದ್ದರಿಂದ ಕ್ಲಬ್ ನ ಸದಸ್ಯರುಗಳು ಸಕಾಲಕ್ಕೆ ಆಗಮಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ಕ್ಲಬ್ ನ ಆಡಳಿತ ಮಂಡಳಿಯ ಪರವಾಗಿ
(ರವಿಶಂಕರ್ ಪಲ್ಲಾಗಟ್ಟಿ)
ಗೌರವ ಕಾರ್ಯದರ್ಶಿಗಳು

## ಭರ್ತಿಯಾಗುವತ್ತ ಕೊಮಾರನಹಳ್ಳಿ ಕೆರೆ...



ಚಿತ್ರ : ಜಿಗಳಿ ಪ್ರಕಾಶ್

ಮಲೇಬೆನ್ನೂರು, ಸೆ.24- ಕೊಮಾರನಹಳ್ಳಿಯ ಹೆಳವನಕಟ್ಟೆ ಲಕ್ಷ್ಮೀ ರಂಗನಾಥ ಸ್ವಾಮಿಯ 97 ಎಕರೆ ವಿಸ್ತೀರ್ಣದ ಐತಿಹಾಸಿಕ ಕೆರೆ ಭರ್ತಿಯಾಗುವತ್ತಾ ಹೆಜ್ಜೆ ಇಟ್ಟಿದೆ. ಮಳೆ ನೀರಿನ ಜೊತೆಗೆ ಭದ್ರಾ ನಾಲೆಯ ನೀರನ್ನೂ ಪಂಪ್‌ಸೆಟ್‌ಗಳ ಮೂಲಕ ಕಳೆದ ಒಂದು ತಿಂಗಳಿನಿಂದ ನಿರಂತರವಾಗಿ ಕೆರೆಗೆ ಹರಿಸುತ್ತಿರುವುದರಿಂದ ಕೆರೆಯಲ್ಲಿ ನೀರಿನ ಮಟ್ಟ ಸಾಕಷ್ಟು ಏರಿಕೆ ಆಗುತ್ತಿದ್ದು, ಈ ವಾರದಲ್ಲೇ ಕೆರೆ ಭರ್ತಿಯಾಗಿ ಕೊಡಿ ಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಬಹಳ ನಿರೀಕ್ಷೆಯಲ್ಲಿದ್ದ ಕಮ್ಮಾರಗಟ್ಟಿ ಜಾಕ್‌ವೆಲ್‌ನಿಂದ ಬೆನಕನಹಳ್ಳಿ ಏತ ನೀರಾವರಿ ಯೋಜನೆಯ ನೀರು ಇಷ್ಟರಲ್ಲೇ ಪೈಪ್‌ಲೈನ್ ಮೂಲಕ ಈ ಕೆರೆಗೆ ಹರಿಯಬೇಕಾಗಿತ್ತು. ಆದರೆ, ವಿದ್ಯುತ್ ಸಂಪರ್ಕ ವಿಳಂಬವಾಗಿರುವುದರಿಂದ ತಡವಾಗಿದೆ ಎಂದು ಗ್ರಾಮದ ಜಿ.ಮಂಜುನಾಥ್ ಪಟೇಲ್ ತಿಳಿಸಿದರು. ನದಿ ನೀರು ಇನ್ನೊಂದೆ ನಿರಂತರವಾಗಿ ಕೆರೆಗೆ ಹರಿಯುವುದರಿಂದ ಜನ - ಜಾನುವಾರುಗಳಿಗೆ, ಪ್ರಾಣಿ - ಪಕ್ಷಿಗಳಿಗೆ ಮತ್ತು ಕೆರೆ ಪಾತ್ರದ ತೋಟಗಳಿಗೆ ಹಾಗೂ ಬೋರ್‌ವೆಲ್‌ಗಳಿಗೆ ತುಂಬಾ ಅನುಕೂಲವಾಗಲಿದೆ ಎಂದರು.

ಸುತ್ತಲು ಹಸಿರಿನಿಂದ ಕೂಡಿದ ಗುಡ್ಡ ಮತ್ತು ತೋಟಗಳ ನಡುವೆ ಹಾಗೂ ಹೊಸಪೇಟೆ - ಶಿವಮೊಗ್ಗ ಹೆದ್ದಾರಿ ಪಕ್ಕದಲ್ಲೇ ಇರುವ ಈ ಕೆರೆ ಪ್ರಯಾಣಿಕರ ಕಣ್ಮನ ಸೆಳೆಯುತ್ತಿದೆ.

## ಮಲೇಬೆನ್ನೂರಿನಲ್ಲಿ ಇಂದು ಪುರಸಭೆ ಸಭೆ

ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಪುರಸಭೆಯ ಸಾಮಾನ್ಯ ಸಭೆಯನ್ನು ಪ್ರಭಾರಿ ಅಧ್ಯಕ್ಷೆ ನಪ್ಸಿಯಾ ಬಾನು ಚಮನ್ ಷಾ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಮುಖ್ಯಾಧಿಕಾರಿ ಭಜಕ್ಕನವರ್ ತಿಳಿಸಿದ್ದಾರೆ .

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಮ್.ಸಿ.ಸಿ. ಎ ಬ್ಲಾಕ್, ನ್ಯಾಯಾಧೀಶರ ವಸತಿ ಗೃಹಗಳು, ತೊಗಟವೀರ ಕಲ್ಯಾಣ ಮಂದಿರ, ವಿನೋಬ ನಗರ 1ನೇ ಮುಖ್ಯ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**IN THE COURT OF THE PRINCIPAL SENIOR CIVIL JUDGE AND CJM AT DAVANGERE**
**S.C No. 51 of 2023**
Plaintiff : Canara Bank Vinobanagara Branch. - *Vs.*-
Defendants : Sri Kotresh P s/o Praven kumar
Defendant : Sri Kotresh P. s/o Praven kumar Business, 1st Main, 6th Cross Old Jalinagara, Davanagere.
**Summons under Order 5 Rule 20(1)(a) of CPC.**
WHEREAS, the plaintiff Canara bank, Vinobanagara Branch, Davangere has instituted the suit against you for the recovery a sum of Rs 69,490/- and for court costs and such other reliefs. You the defendant hereby summoned to appear in this court in person or by a pleader duly instructed and able to answer all your material questions relating to the said suit who shall be accompanied by some person able to answer all such questions, on the 25/11/2024 at Davangere in the forenoon 11 O'Clock to answer the claim and as the day fixed for your appearance is appointed for the final disposal of the suit.
Take notice that in default of your appearance on the day before mentioned. the suit will be heard and determined in your absence.
Given under my hand and seal of the court this 11 th day sep 2024
**GOPALA.M.**
Advocate for Plaintiff
**9448233500**
DAVANAGERE
DATE : 11.09.2024
By order of the court
**Chief Ministerial Officer**
Principal Senor Civil Judge
And CJM Court Davangere.

**ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ**
ನಂ. 657/1A, ಮಂಡಿಪೇಟೆ, ದಾವಣಗೆರೆ 577 001

**2023-2024ನೇ ಸಾಲಿನ 27ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

ದಾವಣಗೆರೆ ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ., ಇದರ 2023-2024ನೇ ಸಾಲಿನ 27ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 25.09.2024ನೇ ಬುಧವಾರ ಬೆಳಿಗ್ಗೆ 10.45ಕ್ಕೆ ಶ್ರೀ ಬೀರೇಶ್ವರ ಭವನ, ಎಸ್.ಪಿ. ಕಛೇರಿ ಹತ್ತಿರ, ದೇವರಾಜ ಅರಸು ಬಡಾವಣೆ, 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ಪರಶುರಾಮ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

*ವಿಶೇಷ ಸೂಚನೆ : ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸಿ ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.*

ಕಾರ್ಯಕಾರಿ ಮಂಡಳಿ ಪರವಾಗಿ
ಸಹಿ/- ಬಿ.ಎಲ್. ಗೌಡ, ವ್ಯವಸ್ಥಾಪಕರು

## ವೀರಶೈವ ಮಹಾಸಭಾ ರಾಜ್ಯ ಘಟಕದ ಕಾರ್ಯನಿರ್ವಾಹಕ ಸಮಿತಿಗೆ ಜ್ಯೋತಿ ರಾಧೇಶ್ ಜಂಬಗಿ ಆಯ್ಕೆ



ದಾವಣಗೆರೆ, ಸೆ. 24- ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಕಾರ್ಯನಿರ್ವಾಹಕ ಸಮಿತಿಗೆ ಶ್ರೀಮತಿ ಜ್ಯೋತಿ ರಾಧೇಶ್ ಜಂಬಗಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ವೀರಶೈವ ಮಹಾಸಭಾದ ಚುನಾವಣಾಧಿಕಾರಿ ಸಿ.ಎಂ. ವೀರೇಶ್ ಘೋಷಿಸಿದ್ದಾರೆ.

ಬೆಂಗಳೂರಿನಲ್ಲಿ ಕಳೆದ ವಾರ ನಡೆದ ಸಮಾರಂಭದಲ್ಲಿ ಜ್ಯೋತಿ ರಾಧೇಶ್ ಜಂಬಗಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮಹಾಸಭಾ ರಾಷ್ಟ್ರ ಘಟಕದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಮಹಾ ಪ್ರಧಾನ ಕಾರ್ಯದರ್ಶಿ ಹಾಗೂ ಸಚಿವ ಈಶ್ವರ ಖಂಡ್ರೆ, ರಾಜ್ಯ ಘಟಕದ ಅಧ್ಯಕ್ಷ ಶಂಕರ್ ಬಿದರಿ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಕಪ್, ಹಾಳೆ, ಗುಟ್ಕಾ, ಸಿಗರೇಟ್‌ಗಳ ಮಾರಾಟ ನಿಷೇಧ


ದಾವಣಗೆರೆ, ಸೆ. 24- ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವ್ಯಾಪಾರ ಮಾಡುವ ಬೀದಿ ಬದಿ ವ್ಯಾಪಾರಿಗಳು ಈ ಹಿಂದೆ ಪಾಲಿಕೆಯಿಂದ ನೋಂದಾಯಿಸಲ್ಪಟ್ಟ, ನೋಂದಣಿ ಮಾಡಿಸದೇ ಇರುವ ಬೀದಿ ಬದಿ ವ್ಯಾಪಾರಿಗಳು ನಗರದ ರಸ್ತೆ ಬದಿಗಳಲ್ಲಿ ಸಾರ್ವಜನಿಕರಿಗೆ, ವಾಹನ ಸಂಚಾರಕ್ಕೆ ರಸ್ತೆಗಳ ಸ್ವಚ್ಛತೆಗೆ ತೊಂದರೆಯಾಗುವಂತೆ ತಳ್ಳುವ ಗಾಡಿಗಳಲ್ಲಿ ಚಹಾ, ತಿಂಡಿ, ಪ್ಲಾಸ್ಟಿಕ್ ಕಪ್, ಗುಟ್ಕಾ, ಸಿಗರೇಟ್‌ಗಳನ್ನು ಮಾರಾಟ ಮಾಡುತ್ತಿದ್ದು, ಅದರಿಂದ ಉತ್ಪತ್ತಿಯಾದ ತ್ಯಾಜ್ಯಗಳನ್ನು ರಸ್ತೆ, ಚರಂಡಿ, ಖಾಲಿ ನಿವೇಶನಗಳಲ್ಲಿ ಹಾಕಿ ಸುಡುತ್ತಿರುವುದು ಕಂಡುಬಂದಿರುತ್ತದೆ.

ಇದರಿಂದಾಗಿ ಚರಂಡಿಗಳು ಬ್ಲಾಕ್ ಆಗಿ ಸೊಳ್ಳೆಗಳ ಸಂತಾನೋತ್ಪತ್ತಿಗೆ ಕಾರಣವಾಗುವುದಲ್ಲದೇ, ವಾಯು ಮಾಲಿನ್ಯಕ್ಕೂ ಕಾರಣವಾಗಿರುತ್ತದೆ. ಆದ್ದರಿಂದ ಎಲ್ಲಾ ಬೀದಿಬದಿ ವ್ಯಾಪಾರಿಗಳು ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವಂತಹ ಪ್ಲಾಸ್ಟಿಕ್ ಹಾಳೆಗಳು, ಪ್ಲಾಸ್ಟಿಕ್ ಕಪ್, ಗುಟ್ಕಾ, ಸಿಗರೇಟ್‌ಗಳನ್ನು ಮಾರಾಟ ಮಾಡದಂತೆ ಹಾಗೂ ಕಸವನ್ನು ಹೊರಗಡೆ ಚೆಲ್ಲಿ ಸುಡದಂತೆ ಎರಡು ತ್ಯಾಜ್ಯ ಸಂಗ್ರಾಹಕಗಳನ್ನಿರಿಸಿ, ತ್ಯಾಜ್ಯವನ್ನು ನಿಗದಿತ ತ್ಯಾಜ್ಯ ಸಂಗ್ರಹಕಾರರಿಗೆ ಬಳಕೆದಾರರ ಶುಲ್ಕ ಪಾವತಿಸಿ ನೀಡಬೇಕು ಎಂದು ಸೂಚಿಸಲಾಗಿದೆ.

ಈ ಸೂಚನೆಗಳನ್ನು ಉಲ್ಲಂಘಿಸಿ ನಗರ ಸ್ವಚ್ಛತೆಗೆ ಧಕ್ಕೆಯುಂಟು ಮಾಡುವುದು ಕಂಡುಬಂದಲ್ಲಿ ದಂಡ ವಿಧಿಸುವುದರೊಂದಿಗೆ ತೆರವುಗೊಳಿಸಲು ಕ್ರಮ ವಹಿಸಲಾಗುವುದು ಎಂದು ಮಹಾನಗರಪಾಲಿಕೆ ಆಯುಕ್ತರಾದ ರೇಣುಕಾ ಅವರು ಎಚ್ಚರಿಸಿದ್ದಾರೆ.

## ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಗೆ ಆಕಾಂಕ್ಷ, ವೀರೇಶ್





ದಾವಣಗೆರೆ, ಸೆ.23- ಬೆಂಗಳೂರು ಕೋರಮಂಗಲ ಇಂಡೋರ್ ಸ್ಟೇಡಿಯಂನಲ್ಲಿ ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ವತಿಯಿಂದ ನಡೆದ 15ನೇ ರಾಜ್ಯ ಮಟ್ಟದ ಕರಾಟೆ ಚಾಂಪಿಯನ್ ಶಿಪ್ ಆಯ್ಕೆ ಪ್ರಕ್ರಿಯೆಯಲ್ಲಿ ನಗರದ ಕರಾಟೆ ಕೇಸರಿ ಸಂಸ್ಥೆಯ ಆಕಾಂಕ್ಷ ಆರ್., ವೀರೇಶ್ ಕುಮಾರ್ ಎನ್.ಎ. ಇವರುಗಳು ಕುಮಿಟೆ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ನವದೆಹಲಿಯಲ್ಲಿ ನಡೆಯುವ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಆಕಾಂಕ್ಷ ಹಾಗೂ ವೀರೇಶ್, ಕರಾಟೆ ಕೇಸರಿ ಮಾರ್ಷಲ್ ಆರ್ಟ್ಸ್ ಹಾಗೂ ದಾವಣಗೆರೆ ಡಿಸ್ಟ್ರಿಕ್ಟ್ ಕರಾಟೆ ಅಸೋಸಿಯೇಷನ್ ತರಬೇತು ದಾರ ಟಿ. ಕುಬೇರನಾಯ್ಕ, ಎಂ. ಜೀವನ್ ಇವರ ಬಳಿ ತರಬೇತಿ ಪಡೆದಿರುತ್ತಾರೆ.

## ಸ್ಥಿರಾಸ್ತಿಗಳ ನೋಂದಣಿಗೆ 'ಇ-ಆಸ್ತಿ' ಖಾತಾ ಕಡ್ಡಾಯ

ದಾವಣಗೆರೆ, ಸೆ.24 - ಮಹಾನಗರ ಪಾಲಿಕೆ ವ್ಯಾಪ್ತಿ ಮತ್ತು ನಗರ ಸ್ಥಳೀಯ ಸಂಸ್ಥೆ ಸಿ.ಎಂ.ಸಿ, ಟಿ.ಎಂ.ಸಿ ಸ್ಥಿರಾಸ್ತಿಗಳ ನೋಂದಣಿಗೆ ಇ-ಆಸ್ತಿ ಖಾತಾವನ್ನು ಕಾವೇರಿ 2.0 ತಂತ್ರಾಂಶದಲ್ಲಿ ದಿನಾಂಕ ಸೆ.23 ರಿಂದ ಸಂಯೋಜನೆಗೊಳಿಸಿಲು ಕಡ್ಡಾಯ ಮಾಡಿದ್ದು, ಸಾರ್ವಜನಿಕರು ತಮ್ಮ ಇ-ಸ್ವತ್ತಿಗೆ ಸಂಬಂಧಿಸಿದ ಇ-ಆಸ್ತಿ ಖಾತಾ ಹೊಂದಿರುವುದನ್ನು ಖಚಿತಪಡಿಸಿಕೊಂಡು ನೋಂದಣಿ ವೇಳೆ ಇ-ಸ್ವತ್ತಿಗೆ ಸಂಬಂಧಿಸಿದ ಗುರುತಿನ ಮಾಹಿತಿಯನ್ನು ಇ-ಆಸ್ತಿ ತಂತ್ರಾಂಶದಿಂದ ಪಡೆದು ಕಾವೇರಿ-2 ರಲ್ಲಿ ನೋಂದಣಿ ಮಾಡಲಾಗುವುದು ಎಂದು ಹರಿಹರ ಉಪನೋಂದಣಾಧಿಕಾರಿ ನಾಗರಾಜ್ ತಿಳಿಸಿದ್ದಾರೆ.


## ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಲಿ.


#1058/3-4, ಜಯದೇವ ಸರ್ಕಲ್ ಹತ್ತಿರ, ಲಾಯರ್ ರೋಡ್, ಕೆ.ಬಿ. ಬಡಾವಣೆ, ದಾವಣಗೆರೆ-577 002. ಫೋನ್ : 08192 257901/255875, 230304,



ಎಂ. ಜಯಕುಮಾರ್
ಅಧ್ಯಕ್ಷರು



ಕೆ.ಆರ್. ಪರಮೇಶ್ವರಪ್ಪ
ನಿರ್ದೇಶಕರು



ಹೆಚ್.ವಿ. ಮಂಜುನಾಥಸ್ವಾಮಿ
ನಿರ್ದೇಶಕರು



ಕೆ.ಜಿ. ಚನ್ನಬಸಪ್ಪ
ನಿರ್ದೇಶಕರು



ಎಂ.ಎಸ್. ಶಿವಯೋಗಿ
ನಿರ್ದೇಶಕರು



ಶ್ರೀಮತಿ ಜ್ಯೋತಿ ಆರ್. ಜಂಬಗಿ
ನಿರ್ದೇಶಕರು



ಎನ್. ನೀಲಗಿರಿ
ನಿರ್ದೇಶಕರು



ಎಸ್.ವಿ. ರಾಮಚಂದ್ರಪ್ಪ
ನಿರ್ದೇಶಕರು



ಮಹೇಶ್ ಬಿ. ಶೇಂಡಗೆ
ನಿರ್ದೇಶಕರು



ಕೆ.ಎಸ್. ಸತೀಶ್
ನಿರ್ದೇಶಕರು



ಶ್ರೀಮತಿ ಬಿ.ವಿ. ಮಂಗಳ ಬೂಸ್ನೂರು
ನಿರ್ದೇಶಕರು



ಶ್ರೀ ಸೋಗಿ ಎಸ್. ಶಮಂತ್
ನಿರ್ದೇಶಕರು (30.12.2022ರಿಂದ)



ಕೆ. ಮುರುಗೇಶಪ್ಪ
ವಿಶೇಷ ಆಹ್ವಾನಿತರು



ಎಸ್. ಓಂಕಾರಪ್ಪ
ಉಪಾಧ್ಯಕ್ಷರು

### 50ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸ್

ದಿನಾಂಕ : 25.09.2024ನೇ ಬುಧವಾರ ಬೆಳಿಗ್ಗೆ 11.30 ಗಂಟೆಗೆ ಸರಿಯಾಗಿ ಬ್ಯಾಂಕಿನ 2023-24ನೇ ಸಾಲಿನ 50ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಎಂ. ಜಯಕುಮಾರ್‌ರವರ ಅಧ್ಯಕ್ಷತೆಯಲ್ಲಿ ದಿ. ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಸಮುದಾಯ ಭವನ, ಎಂಸಿಸಿ 'ಎ' ಬ್ಲಾಕ್, ರಾಮಕೃಷ್ಣ ಆಶ್ರಮದ ಎದುರು, ವಿನೋಬನಗರ, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಕಾರಣ ಸರ್ವ ಸದಸ್ಯರುಗಳು ಸಮಯಕ್ಕೆ ಸರಿಯಾಗಿ ಹಾಜರಾಗಬೇಕಾಗಿ ಕೋರಲಾಗಿದೆ.

| ಸಹಿ/- | ಸಹಿ/- | ಸಹಿ/- |
|---|---|---|
| ಎಂ. ಜಯಕುಮಾರ್ | ಎಸ್. ಓಂಕಾರಪ್ಪ | ಎಂ.ಎಸ್. ಅರುಣ |
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕರು (ಪ್ರ) |

**ಸೂಚನೆ :**

1) ಈಗಾಗಲೇ ಬ್ಯಾಂಕಿನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ಕೆಲವು ಪ್ರತಿಗಳು ವಿಳಾಸ ಬದಲಾವಣೆಯಿಂದ ಬ್ಯಾಂಕಿಗೆ ವಾಪಸ್ ಬಂದಿರುತ್ತವೆ. ಆದಕಾರಣ, ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬಂದು ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಕೆ.ವೈ.ಸಿ (ಚುನಾವಣಾ ಕಾರ್ಡ್, ಪಾನ್ ಕಾರ್ಡ್, ಆಧಾರ ಕಾರ್ಡ್) ನೀಡಿ, ಪತ್ರಿಕೆ ಪಡೆಯತಕ್ಕದ್ದು ಹಾಗೂ ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿಕೆ.

### ಬ್ಯಾಂಕಿನ ಆರ್ಥಿಕ ಪ್ರಗತಿ

(ರೂ. ಲಕ್ಷಗಳಲ್ಲಿ)

| ವಿವರಗಳು | 31.03.2024 | 31-08-2024 |
|---|---|---|
| 1) ಷೇರು ಬಂಡವಾಳ | 131.46 | 132.51 |
| 2) ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು | 228.77 | 228.77 |
| 3) ಠೇವಣಿಗಳು | 3639.35 | 3823.10 |
| 4) ಸಾಲ ಮತ್ತು ಮುಂಗಡಗಳು | 1747.38 | 1758.45 |
| 5) ದುಡಿಯುವ ಬಂಡವಾಳ | 4063.53 | 4094.53 |
| 6) ನಿವ್ವಳ ಲಾಭ | 42.73 | 25.43 |
| 7) ಸದಸ್ಯರುಗಳು | 6170 | 6176 |
| 8) ಡಿವಿಡೆಂಡ್ ಹಂಚಿಕೆ | 12% ಉದ್ದೇಶಿತ | - |


## ರಾಜ್ಯಮಟ್ಟದ ಪವರ್ ವೇಯ್ಟ್ ಲಿಫ್ಟಿಂಗ್ ಬುತ್ತಿ ಜುನೇದ್‌ಗೆ ಕಂಚು



ದಾವಣಗೆರೆ, ಸೆ. 24 - ಮಂಗಳೂರಿನಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ ಪವರ್ ವೇಯ್ಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ಬುತ್ತಿ ಜುನೇದ್ ಅವರು ಕಂಚಿನ ಪದಕ ಪಡೆದಿದ್ದಾರೆ.


ಮಹಾನಗರ ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್ ಅವರ ಶಿಷ್ಯರಾದ ಬುತ್ತಿ ಜುನೇದ್, ಕರ್ನಾಟಕ ರಾಜ್ಯ ಎಸ್.ಎಸ್. ಮಲ್ಲಿಕಾರ್ಜುನ್ ಸೇವಾ ಸಂಸ್ಥೆಯ ಅಧ್ಯಕ್ಷ ಬುತ್ತಿ ಹುಸೇನ್ ಪೀರ್ ಅವರ ಪುತ್ರ.

ಇವರಿಗೆ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಪ್ರಭಾ ಮಲ್ಲಿಕಾರ್ಜುನ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹಾಗೂ ಇನ್ನೂ ಅನೇಕರು ಶುಭಕೋರಿದ್ದಾರೆ.

**ಭದ್ರಾ ಜಲಾಶಯ**

ನೀರಿನ ಮಟ್ಟ : 186 ಒಳ ಹರಿವು : 3046 ಕ್ಯೂಸೆಕ್ಸ್
ಹೊರ ಹರಿವು : 3949 ಕ್ಯೂಸೆಕ್ಸ್
ಕಳೆದ ವರ್ಷ : 160 ಅಡಿ 5 ಇಂಚು


### ಅಭಿನಂದನೆಗಳು



ದಿ|| ಪೈಲ್ವಾನ್ ಚೆನ್ನಬಸಪ್ಪ (ಮುತ್ತಜ್ಜ)



ಪೈಲ್ವಾನ್ ಎಸ್.ಸಿ. ಬಸವರಾಜಪ್ಪ (ಅಜ್ಜ)

ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ವತಿಯಿಂದ ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ 14.09.2024ರಂದು ನಡೆದ 15ನೇ ರಾಜ್ಯಮಟ್ಟದ ಜ್ಯೂನಿಯರ್ ಕರಾಟೆ ಚಾಂಪಿಯನ್‌ಶಿಪ್-2024 ರಲ್ಲಿ ನಗರದ ಚಿ. ವೀರೇಶ್‌ಕುಮಾರ್ ಎನ್.ಎ. ಪ್ರಥಮ ಸ್ಥಾನ ಪಡೆದು ನವದೆಹಲಿಯಲ್ಲಿ ನಡೆಯುವ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿದ್ದು ಅವರಿಗೆ ಅಭಿನಂದನೆಗಳು.



ಶುಭ ಕೋರುವವರು :

ಅಜ್ಜಿ : ಕಮಲಮ್ಮ ನಾಗಪ್ಪ,
ಶ್ರೀಮತಿ ವೀಣಾ ಅನಿಲ್ ಕುಮಾರ್,
ಗುರುಗಳು : ಕುಬೇರ್ ನಾಯ್ಕ್ & ಜೀವನ್,
ಲಿಂಗದ ಕಲ್ಗುಡಿ ದಿ. ಪೈಲ್ವಾನ್ ಚೆನ್ನಬಸಪ್ಪನವರ ಕುಟುಂಬ ವರ್ಗ

REQUIRED
• Cook • Capitan
• Helper • Cleaner
Contact :




Hideout Fast Food Restaurant
Dental College Road, Davangere
Call: 9448533785 & 8073558425

### ಜನ್ಮ ದಿನದ ಶುಭಾಶಯಗಳು



ಇಂದು ಜನ್ಮದಿನದ ಸಂಭ್ರಮದಲ್ಲಿರುವ ಶ್ರೀ ಸ್ವಾಮಿ ವಿವೇಕಾನಂದ ಗೆಳೆಯರ ಬಳಗದ ಅಧ್ಯಕ್ಷರೂ, ಲಯನ್ಸ್ ಕ್ಲಬ್ ಸದಸ್ಯರು, ಮಾರುತಿ ಸೇವಾ ಸಮಿತಿ ಕಾರ್ಯದರ್ಶಿಗಳೂ, 10ನೇ ವಾರ್ಡಿನ ಬಿಜೆಪಿ ಬೂತ್ ಅಧ್ಯಕ್ಷರೂ, ಆತ್ಮೀಯರೂ ಆದ

**ಶ್ರೀ ಎರ್ರಿಸ್ವಾಮಿ**

ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ ಆಯುರಾರೋಗ್ಯ, ಐಶ್ವರ್ಯ, ಸುಖ, ಶಾಂತಿ, ನೆಮ್ಮದಿ ನೀಡಲೆಂದು ಶುಭ ಹಾರೈಸುತ್ತೇವೆ...

ಎರ್ರಿಸ್ವಾಮಿ ಗೆಳೆಯರ ಬಳಗ
ದಾವಲ್ ಪೇಟೆ, ದಾವಣಗೆರೆ.




Available @ GUPTA'S SHOPPE
#19, New Murugharajendra Complex, Opp.: DDPI Office, Davangere.
99866 12345
90351 55455


## ಬೆಳ್ಳೂಡಿ ಗ್ರಾಮದ ಕಲ್ಲಪ್ಪರ ವೆಂಕಪ್ಪ ನಿಧನ



ಹರಿಹರ ತಾಲ್ಲೂಕು ಬೆಳ್ಳೂಡಿ ಗ್ರಾಮದ ಹಿರಿಯರಾದ

**ಶ್ರೀ ಕಲ್ಲಪ್ಪರ ವೆಂಕಪ್ಪ**

ಅವರು ದಿನಾಂಕ 24.9.2024ರ ಮಂಗಳವಾರ ಮಧ್ಯಾಹ್ನ 12.45ಕ್ಕೆ ನಿಧನರಾದರು. ಮೃತರಿಗೆ 96 ವರ್ಷ ವಯಸ್ಸಾಗಿತ್ತು. ಮೃತರು, ಬೆಳ್ಳೂಡಿ ಮಂಡಲ ಪಂಚಾಯ್ತಿ ಉಪಪ್ರಧಾನರಾಗಿ ಮತ್ತು ಬೆಳ್ಳೂಡಿಯ ಪಟೇಲ್ ಗುರುಶಾಂತಪ್ಪ ಪ್ರೌಢಶಾಲೆಯ ಸಂಸ್ಥಾಪಕ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.9.2024ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಬೆಳ್ಳೂಡಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

**: ದುಃಖತಪ್ತರು :**

ಪುತ್ರರಾದ : ಕೆ.ವಿ. ರುದ್ರೇಶ್, ಅಧ್ಯಕ್ಷರು, ಹರಿಹರ ತಾ. ಕೃಷಿಕ ಸಮಾಜ, ಕೆ.ವಿ. ಕಲ್ಲೇಶ್
ಪುತ್ರಿಯರಾದ : ಶ್ರೀಮತಿ ಸಾವಿತ್ರಮ್ಮ ನಾಗರಾಜಪ್ಪ ಮೆಳ್ಳೇಕಟ್ಟೆ
ಶ್ರೀಮತಿ ಗಂಗಮ್ಮ ಚಂದ್ರಶೇಖರಪ್ಪ ಕರೂರು, ಹರಿಹರ
ಶ್ರೀಮತಿ ಗೌರಮ್ಮ ಶಿವಲಿಂಗಪ್ಪ ಕುಂದುವಾಡ, ದಾವಣಗೆರೆ.
ಶ್ರೀಮತಿ ಸರಳ ವಿರೂಪಾಕ್ಷಗೌಡ ಹರಪನಹಳ್ಳಿ
ಮತ್ತು ಮೊಮ್ಮಕ್ಕಳು ಹಾಗೂ ಬೆಳ್ಳೂಡಿ ಗ್ರಾಮಸ್ಥರು, ಬಂಧು-ಮಿತ್ರರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas